ಆಂತರಿಕ ಪ್ರಸಾರಕ್ಕಾಗಿ ಮಾತ್ರ

2012

ಜನವರಿ 2012

ಸಂಪುಟ 5 ಸಂಚಿಕೆ 1

ಶ್ರೀ ರಾಮಚಂದ್ರ ಮಿಷನ್®

India ECHOES

ONE WORLD ONE HUMANITY


# ಹೊಸವರ್ಷದ ಶುಭಾಶಯಗಳು



2012 ರ ಜನವರಿ 1ರ ದಿನ, ಕೆಲ ದಿನಗಳಿಂದ ತೇವಾಂಶದಿಂದ ಕೂಡಿದ್ದ ಮಂಕು ವಾತಾರಣ ಮರೆಯಾಗಿ ಶುಭ್ರ ಆಕಾಶದೊಡನೆ ಉದಯವಾಯಿತು. ಕಳೆದೆರಡು ದಿನಗಳ ಮಳೆಯು ವಾತಾವರಣಕ್ಕೆ ತಾಜಾತನವನ್ನು ತಂದಿದ್ದಿತು. ಆಶ್ರಮವು ತಮ್ಮ ಪೂಜ್ಯ ಗುರುಗಳ ಕ್ಷಣ ದರ್ಶನವನ್ನದರೂ ಮಾಡಿ ತಮ್ಮ ಹೊಸವರ್ಷವನ್ನು ನವ ಭರವಸೆ ಮತ್ತು ಧ್ಯೇಯಗಳೊಡನೆ ಸುರು ಮಾಡಬೇಕೆಂದು ಹಂಬಲಿಸುತ್ತಿದ್ದ ಅಭ್ಯಾಸಿಗಳಿಂದ ತುಂಬಿಹೋಗಿದ್ದಿತು. ಸತ್ಸಂಗ ಆರಂಭವಾದಾಗ ವಾತಾವರಣವು ಶುಭ್ರವಾಗಿದ್ದು, ಗುರುಗಳು 'ದಟ್ಸ್ ಆಲ್' ಹೇಳಿದ ಮರುಕ್ಷಣವೇ ಮಳೆ ಪ್ರಾರಂಭವಾಯಿತು. ಸಣ್ಣ ತುಂತುರುವಿನೊಡನೆ ಪ್ರಾರಂಭವಾದ ಮಳೆ ಕೆಲ ನಿಮಿಷಗಳಲ್ಲೇ ಪ್ರಬಲ ವರ್ಷಧಾರೆಯಾಗಿ ಬದಲಾಯಿತು. ಗುರುಗಳಿಗೆ ನಮ್ಮೆಲ್ಲರೊಡನೆ ಧ್ಯಾನಮಂದಿರದಲ್ಲಿ ಇರಲೇಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿ ನಮ್ಮೊಡನೆ ಕಾಲ ಕಳೆದರು. ಸೋ.ಚಕ್ರಪಾಣಿಯವರು ತಮಿಳಿನಲ್ಲಿ ಮಾತನಾಡಿ ಹೇಗೆ ಒಬ್ಬ ತಾಯಿಯು ತನ್ನ ಮಗು ತೊದಲು ಹೆಜ್ಜೆ ಹಾಕುವುದನ್ನು ಆನಂದಿಸುವುದರೊಡನೆ ಅದಕ್ಕೆ ನಡೆಯಲು ಸಹಾಯವನ್ನೂ ಮಾಡುತ್ತಾಳೋ ಹಾಗೆಯೇ ಗುರುಗಳೂ ಕೂಡ ನಮ್ಮ ಬೆಳವಣಿಗೆಗೆ ಸಹಾಯ ಮಾಡುವುದರ ಜತೆ ಅದನ್ನು ಆನಂದಿಸುತ್ತಾರೆ ಎಂದರು. ಅವರು ಮಾತು ಮುಂದುವರೆಸಿ, ಈಗ ಬೆಳೆದು ದೊಡ್ಡವರಾದ ನಂತರ ನಮ್ಮ ಮೊದಲ ಕರ್ತವ್ಯ ಏನೆಂದರೆ ಗುರುಗಳಿಗೆ ನಾವು ನಮ್ಮ ಹೊಣೆಯನ್ನು ನಾವೇ ಹೊರಬಲ್ಲ ಸಾಮರ್ಥ್ಯ ಉಳ್ಳವರಾಗಿದ್ದೇವೆಂಬುದನು ತೋರಿಸುವುದು. ಅರ್ಥಾತ್ ಗುರುಗಳಿಗೆ ಯಾವುದೇ ವಿಧದ ತೊಂದರೆ ನೀಡದೆ ಅವರನ್ನು ಯಾವುದೇ ವಿಚಾರಗಳಿಗೂ ಚಿಂತೆಗೆ ದೂಡದೆ ಆಧ್ಯಾತ್ಮಿಕ ಪಥದ ಜವಾಬ್ದಾರಿಯುತ ಮನುಷ್ಯರಾಗುವುದು. ನಂತರ ಸೋ.ನಿಹಾರಿಕಾ ಎಲ್ಲರ ಹೃದಯಗಳಲ್ಲೂ ಗುರುಗಳ ಮೇಲಿನ ಪ್ರೇಮಭಾವ ತುಂಬುವಂತಹ ತಮ್ಮ ಕೆಲ ಕವನಗಳನ್ನ ವಾಚಿಸಿದರು. ಮಳೆ ಸುರಿಯುತ್ತಲೇ ಇತ್ತು ಆದರೆ ಗುರುಗಳು ತಮ್ಮ ಕಾಟೇಜ್‌ಗೆ ಹೊರಟರು.

ಗುರುಗಳು ಇಡೀ ದಿನ ಹಲವಾರು ಗುಂಪುಗಳಲ್ಲಿ ಅಭ್ಯಾಸಿಗಳನ್ನು ಭೇಟಿ ಮಾಡುವ ಮೂಲಕ ಹೆಚ್ಚಿನ ಶ್ರಮಕ್ಕೊಳಗಾಗಬೇಕಾಯಿತು. ಅವರ ರಾತ್ರಿಯ ಊಟದ ವೇಳೆಗಾಗಲೇ ಯಾರಾದರೂ ಗುರುತಿಸುವ ಮಟ್ಟಿಗೆ ಅವರು ಬಳಲಿದ್ದರು. ಆದಾಗ್ಯೂ ಊಟದ ನಂತರ ಕೆಲ ಸಮಯವನ್ನು ಅವರು ಕೆಲ ಮಕ್ಕಳನ್ನು ಭೇಟಿ ಮಾಡುವುದಕ್ಕಾಗಿ ವಿನಿಯೋಗಿಸಿ, ಇನ್ನೇನು ದಿನದ ವಿಶ್ರಾಂತಿಯ ಸಮಯ ಎನ್ನುವಾಗಲೂ ತಮ್ಮ ಕಛೇರಿಗೆ ಹೋಗಲು ನಿರ್ಧರಿಸಿ 30 ನಿಮಿಷಗಳಷ್ಟು ಕಾಲ ಇ ಮೇಲ್‌ಗಳನ್ನು ಪರೀಕ್ಷಿಸಿದರು. ಅವರು ನಾವೆಲ್ಲ ನೋಡಿ ಅನುಸರಿಸಲು ಸಾಧ್ಯವಾಗುವಂತಹ ಉತ್ಕೃಷ್ಟ ಉದಾಹರಣೆಯಂತೆ ತಮ್ಮ ಜೀವನವನ್ನು ನಡೆಸುತ್ತಾರೆ. ಈಗ ನಮಗೆ ನಾವು ಹಾಕಿಕೊಳ್ಳಬೇಕಾದ ಪ್ರಶ್ನೆಯೇನೆಂದರೆ "ನಾವು ಅವರ ಹೆಜ್ಜೆ ಜಾಡಿನಲ್ಲಿದ್ದೇವೆಯೇ?"

## ಬಾಬೂಜಿಯವರಿಂದ ಪ್ರೀತಿಯೊಂದಿಗೆ



2011 ನೇ ಡಿಸಂಬರ್ 22ರಂದು ಬಾಬೂಜಿಯವರು ಗುರುಗಳಿಗೆ ಕಳುಹಿಸಿರುವ ಸಂದೇಶದಲ್ಲಿ, ಗುರುಗಳು ತಮ್ಮ ಜೀವನಶೈಲಿಯಲ್ಲಿ ಒಂದು ಬದಲಾವಣೆಯನ್ನು ಮಾಡಿಕೊಳ್ಳಬೇಕೆಂದು ವಿನಂತಿಸಿಕೊಂಡಿದ್ದಾರೆ. ಇದರಿಂದಾಗಿ ಗುರುಗಳು ತಮ್ಮ ಉತ್ತರ ಭಾರತದ ಪ್ರವಾಸವನ್ನು ರದ್ದು ಮಾಡಿ, ಅವರನ್ನು ನೋಡ ಬಯಸುವವರಿಗಾಗಿ ಮಣಪ್ಪಾಕ್ಕಂನಲ್ಲಿ ಲಭ್ಯವಿರುತ್ತಾರೆ. ಕೆಳಗೆ ಬಾಬೂಜಿಯವರ ಸಂದೇಶದಿಂದ ಆಯ್ದ ಭಾಗವನ್ನು ಕೊಡಲಾಗಿದೆ.

ಕಳೆದ ಅನೇಕ ವರ್ಷಗಳಿಂದ ನೀನು ನಿನ್ನನ್ನೇ ಅದೆಷ್ಟು ಸಮರ್ಪಿಸಿಕೊಂಡಿರುವೆ; ಅತಿಯಾಗಿ ದಣಿದಿರುವ ಭೌತಿಕ ದೇಹದ ಅಸ್ತಿತ್ವಕ್ಕೆ ಇನ್ನು ಸೂಕ್ತವಲ್ಲದ ನಿನ್ನ ಜೀವನಶೈಲಿಯಲ್ಲಿ ಬದಲಾವಣೆ ತಂದುಕೊಳ್ಳುವ ಸಮಯ ಬಂದಿದೆ. ನಿನ್ನ ಶರೀರಕ್ಕೆ ಎಲ್ಲ ರೀತಿಯ ಆರೈಕೆಗಳ ಅಗತ್ಯವಿದೆ; ಅಂದರೆ, ವಿಶ್ರಾಂತಿ, ನೆಮ್ಮದಿ ಹಾಗೂ ನಿನ್ನ ದಿವ್ಯ ವ್ಯಕ್ತಿತ್ವಕ್ಕೆ ಅವಶ್ಯಕವಿರುವ ಮತ್ತೆಲ್ಲ ಅವಧಾನಗಳು ಬೇಕಾಗಿವೆ.

...ನೀನು ನಿನ್ನನ್ನೇ ಸಮರ್ಪಿಸಿಕೊಂಡಿರುವ ಪ್ರಮಾಣವು ಪರಮಾವಧಿ ತಲುಪಿದೆ; ನೀನು ಇನ್ನೆಷ್ಟು ಕೊಡಬೇಕೆಂದಿರುವೆ? ಈ ಘಟ್ಟದಲ್ಲಿ, ಇನ್ನು ಪ್ರಯಾಣ ಮಾಡುವ ಅಗತ್ಯವಿಲ್ಲ. ನಿನ್ನ ಆರೋಗ್ಯ ಈ ರೀತಿ ಹದಗೆಡುವುದು ನಮ್ಮಿಂದ ಸಹಿಸಲಾಗದು. ಇದು ನಾವಿಂದು ನೀಡಿರುವ ಆದೇಶ; ಇದು ನಮ್ಮ ಪ್ರೇಮಾಭಿವ್ಯಕ್ತಿಯ ಪರಾಕಾಷ್ಠೆ, ಏಕೆಂದರೆ ಎಲ್ಲಕ್ಕಿಂತ ಅಧಿಕವಾಗಿ ನಿನ್ನ ಯೋಗಕ್ಷೇಮವೇ ನಮಗೆ ಪ್ರಧಾನ."

(Please refer to the original version in the English newsletter.)



## ಗುರುಗಳ ಪ್ರವಾಸ ವರದಿ

### ಮುಂಬೈ

ಗುರುಗಳು ದುಬೈನಿಂದ ಅಕ್ಟೋಬರ 22ರ ಸಂಜೆ ಬಂದು ನೇರವಾಗಿ ಆಶ್ರಮಕ್ಕೆ ಪ್ರಯಾಣಿಸಿದರು. ಅಲ್ಲಿ ಹಬ್ಬದ ವಾತಾವರಣವಿದ್ದು ಗುರುಗಳು ಆಶ್ರಮದ ಮುಖ್ಯದ್ವಾರದಿಂದ ಪ್ರವೇಶಿಸುತ್ತಿದ್ದಂತೆ ವೈವಿಧ್ಯಮಯ ಗೀತೆಗಳು ಅವರನ್ನು ಸ್ವಾಗತಿಸಿದವು.ಸಾಂಪ್ರದಾಯಿಕ ಸ್ವಾಗತದ ನಂತರ ಅವರು ನೆಲ ಅಂತಸ್ತಿನಲ್ಲಿ ಹೊಸದಾಗಿ ನಿರ್ಮಿಸಿರುವ ಪುಸ್ತಕ ಮಳಿಗೆ ಮತ್ತು ಗ್ರಂಥಾಲಯ ಹಾಗು ಮೇಲಿನ ಅಂತಸ್ತಿನಲ್ಲಿ ನಿರ್ಮಿಸಿರುವ ಕಾಟೇಜ್ ಅನ್ನು ಉದ್ಘಾಟಿಸಿದರು.ಗುರುಗಳು ಅಲ್ಲಿನ



ಪ್ರದೇಶವನ್ನು ಸುತ್ತು ಹಾಕಿ ತಮ್ಮ ತೃಪ್ತಿಯನ್ನು ವ್ಯಕ್ತ ಪಡಿಸಿದರು. ಅವರು ಅಲ್ಲಿ ಒಂದು ರಾತ್ರಿ ಮಾತ್ರ ಉಳಿದು ಭಾನುವಾರದ ಸತ್ಸಂಗ ನಡೆಸಲು ಬಂದಿದ್ದರೂ, ಇನ್ನೂ ಒಂದು ದಿನ ತಮ್ಮ ವಾಸ್ತವ್ಯವನ್ನು ಮುಂದುವರೆಸಿ ಆಶ್ರಮದಲ್ಲಿ ಮೂರು ಸತ್ಸಂಗಗಳನ್ನು ನಡೆಸುವುದೆಂದು ಮಧ್ಯರಾತ್ರಿಯಲ್ಲಿ ನಿರ್ಧರಿಸಿದರು.

ಭಾನುವಾರ ಅಕ್ಟೋಬರ್ 23ರಂದು ಗುರುಗಳು ಸತ್ಸಂಗವನ್ನು ಬೆಳಗಿನ ಒಂಭತ್ತಕ್ಕೆ ನೆರವೇರಿಸಿದರು. ನಂತರ ಅವರು ತಮ್ಮ ಉತ್ತರಾಧಿಕಾರಿಯಾದ ಸೋ.ಕಮಲೇಶ್ ಪಟೇಲ್‌ರನ್ನು ಪರಿಚಯಿಸುತ್ತ ಬಾಬೂಜಿಯವರ "ನನ್ನ ನಂತರ ಮತ್ತೊಬ್ಬರಿರುತ್ತಾರೆ" ಎಂಬ ಹೇಳಿಕೆಯನ್ನು ಉಚ್ಚರಿಸಿದರು.ಮತ್ತು ಶಿಷ್ಯರಿಗೆ ಗುರುಗಳನ್ನು ಆಯ್ಕೆ ಮಾಡುವ ಅವಕಾಶವಿರದೆ, ಅವರು ತಮಗೆ ಸಿಕ್ಕ ಗುರುಗಳಿಂದಲೇ ಗರಿಷ್ಟ ಮಟ್ಟದ ಕಲಿಕೆಗಾಗಿ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂಬುದನ್ನು ಒತ್ತಿ ಹೇಳಿದರು.

ಸೋ. ಕಮಲೇಶ್ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತ "ಅಭ್ಯಾಸಿಗಳಾಗಿ ನಾವು, ಗುರುಗಳು ಸತ್ಸಂಗದ ಸಮಯದಲ್ಲಿ ನಮಗೆ ನೀಡುವ ಸ್ಥಿತಿಯನ್ನು ಅನುಭವಿಸುತ್ತಿದ್ದೇವೆಯೇ? ಅನುಭವಿಸಿ ಸ್ವೀಕರಿಸುತ್ತಿದ್ದೇವೆಯೇ? ಸ್ವೀಕರಿಸಿ ಅದೇ ಸ್ಥಿತಿಯನ್ನು ಕಾಪಾಡಿಕೊಂಡು ನಮ್ಮೊಡನೆ ಒಯ್ಯುತ್ತಿದ್ದೇವೆಯೇ"ಎಂದು ಪ್ರಶ್ನಿಸಿದರು.

ಸೋ.ಕಮಲೇಶ್‌ರ ಭಾಷಣದ ನಂತರ ಮುಂಬೈ ಅಭ್ಯಾಸಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಂಜೆಯ ಸತ್ಸಂಗವು 5 ಗಂಟೆಗೆ ನಡೆದು ನಂತರ ಒಂದು ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ಗುರುಗಳು ಅನೌಪಚಾರಿಕವಾಗಿ ಮಾತನಾಡುತ್ತ, ಅಭ್ಯಾಸಿಗಳು 'ಮಾಯೆ'ಯ ಬಲೆಯಲ್ಲಿ ಸಿಲುಕದಿರಲು ಸೂಚಿಸಿದರು. ಇದರಲ್ಲಿ ಸಿಲುಕದಿರಲು ಏನು ಮಾಡಬೇಕೆಂದು ಅಭ್ಯಾಸಿಯೊಬ್ಬರು ಪ್ರಶ್ನಿಸಿದಾಗ, ಪ್ರಾರ್ಥನೆಗಳು ಮಾತ್ರ ನಮ್ಮನ್ನು ಇದರಿಂದ ಪಾರು ಮಾಡಬಲ್ಲುದು ಎಂದು ಹೇಳಿದರು.

ಅಕ್ಟೋಬರ 24ರ ಬೆಳಗಿನ 7.30ರ ಸತ್ಸಂಗದ ನಂತರ ಅಭ್ಯಾಸಿಗಳ ಶಿಸ್ತು ಮತ್ತು ಸ್ಥಿತಿಯನ್ನು ಪ್ರಶಂಸಿಸಿದ ಗುರುಗಳು ನಂತರ ಮುಂಬೈನ ಅಭ್ಯಾಸಿ ಸಹೋದರರೊಬ್ಬರ ಮನೆಗೆ ತೆರಳಿದರು. ಅಲ್ಲಿಯೇ ಸಂಜೆಯ ಸತ್ಸಂಗವನ್ನೂ ನಡೆಸಿ ಆ ದಿನದ ವಾಸ್ತವ್ಯದ ನಂತರ ಮರುದಿನ ಅಂದರೆ ಅಕ್ಟೋಬರ್ 25 ರ ಮುಂಜಾನೆ ಅಹಮದಾಬಾದ್ ಗೆ ತೆರಳಿದರು.

## ಅಹಮದಾಬಾದ್

ಭಾರತದ ಪಶ್ಚಿಮ ಭಾಗಕ್ಕೆ ದೀಪಾವಳಿಯ ಹಾಗೂ ಗುಜರಾತಿನ ಹೊಸವರ್ಷದ ಸಂದರ್ಭದಲ್ಲಿ ಗುರುಗಳು ಭೇಟಿ ನೀಡಿದ್ದು ಗುಜರಾತಿನ ಅಭ್ಯಾಸಿಗಳಿಗೆ ವಿಶೇಷ ಕೊಡುಗೆಯಾಗಿದ್ದಿತು. ಅವರು ಮಧ್ಯಾಹ್ನದ ಹೊತ್ತಿಗೆ ತಲುಪಿದಾಗ ಅವರನ್ನು ಸುಮಾರು 500 ಅಭ್ಯಾಸಿಗಳು ಜ಼ೋನಲ್ ಆಶ್ರಮದಲ್ಲಿ ಸ್ವಾಗತಿಸಿದರು. ಕೆಲ ಸಮಯದ ವಿಶ್ರಾಂತಿಯ ನಂತರ ಸಂಜೆಯ ಸತ್ಸಂಗವನ್ನು ಸುಮಾರು 3000 ಅಭ್ಯಾಸಿಗಳಿಗಾಗಿ ನಡೆಸಿಕೊಟ್ಟು, ನಂತರ ತಮ್ಮ ಕಿರು ಭಾಷಣದಲ್ಲಿ ತಮ್ಮ ಈ ಪ್ರವಾಸದ ಪ್ರಮುಖ ಉದ್ದೇಶವು ತಮ್ಮ ಭವಿಷ್ಯದ ಉತ್ತರಾಧಿಕಾರಿಯಾದ ಸೋ.ಕಮಲೇಶ್ ಪಟೇಲ್ ರನ್ನು ಪರಿಚಯಿಸುವುದೇ ಆಗಿದೆ ಎಂದರು.

ಮರುದಿನ ದೀಪಾವಳಿಯಾಗಿದ್ದು ಸೋ.ಕಮಲೇಶ್ ರವರು ಬೆಳಗಿನ ಸತ್ಸಂಗವನ್ನು ನಡೆಸಿದರು. ನಂತರ ಸೋ.ಗುರುಪ್ರೀತ್ ರವರು ಹಾಡಿದ ಕೆಲ ಸುಮಧುರವಾದ ಭಜನೆಗಳು ಎಲ್ಲರ ಹೃದಯವನ್ನು ಆನಂದಮಯವನ್ನಾಗಿಸಿತು. ಸಂಜೆ ಆಶ್ರಮದಲ್ಲಿ ಎಲ್ಲೆಲ್ಲೂ ಸುಮಾರು ಸಾವಿರ ದೀಪಗಳು ಬೆಳಗುತ್ತಿದ್ದವು. ಸಂಜೆಯ ಸತ್ಸಂಗಾನಂತರ ವಡೋದರ ಮತ್ತು ಅಹಮದಾಬಾದ್‌ನ ಅಭ್ಯಾಸಿ ಹುಡುಗಿಯರಿಂದ ಸಾಂಪ್ರದಾಯಿಕವಾದ ಗರ್ಬ ನೃತ್ಯ ಪ್ರದರ್ಶನವಿತ್ತು. ದೈವೀ ಪ್ರೇಮದ ಪಸೆಯು ಆಶ್ರಮದ ವಾತಾವರಣವೆಲ್ಲಾ ವ್ಯಾಪಿಸಿದ್ದು ಅಲ್ಲಿನ ಎಲ್ಲರ ಅನುಭವಕ್ಕೆ ಬರುತ್ತಿತ್ತು.

27 ಅಕ್ಟೋಬರ್ ಗುಜರಾತಿನ ಹೊಸವರ್ಷವಾಗಿದ್ದು ಅಲ್ಲಿನ ಸಂಪ್ರದಾಯದಂತೆ ಗುರುಗಳಿಗೆ ಹೊಸವರ್ಷದ ಹಾರೈಕೆ ತಿಳಿಸಲು ಮೂವರು ಪುಟ್ಟ ಮಕ್ಕಳು ಉಪ್ಪಿನೊಂದಿಗೆ ತೆರಳಿ 'ಸಬ್ರಾಸ್' ಹೇಳಿದರು. ಗುರುಗಳು ತಮ್ಮ ಗಾಲ್ಫ್ ಗಾಡಿಯಲ್ಲಿ ಧ್ಯಾನ ಮಂದಿರಕ್ಕೆ ಹೋಗುವ ದಾರಿಯಲ್ಲಿ ಶುಭಾಶಯ ಹೇಳಲು ಕಾದು ನಿಂತಿದ್ದ ನೂರಕ್ಕೂ ಹೆಚ್ಚಿನ ಮಕ್ಕಳನ್ನು ಭೇಟಿಯಾದರು.ಅವರು ಸತ್ಸಂಗವನ್ನು ನಡೆಸಿದ ನಂತರ ಅಹಮದಬಾದ್‌ನ ಒಂದು ಜೋಡಿಯ ವಿವಾಹವನ್ನು ನೆರವೇರಿಸಿದರು.

### ಗುರುಗಳ ಅನೌಪಚಾರಿಕ ಮಾತುಗಳಿಂದ ಆಯ್ದ ಆಣಿಮುತ್ತುಗಳು:

- ಯಾರೋ ಒಬ್ಬರು ತಮ್ಮನ್ನು ತಾವು ಗುರುಗಳಿಗೆ ಪರಿಚಯಿಸಿಕೊಂಡಾಗ, ಅವರು ನಮ್ಮ ಆತ್ಮೀಯರಿಗೂ ಪ್ರಿಯರಾದವರಿಗೂ ನಾವು ಪರಿಚಯಿಸಿಕೊಳ್ಳುವ ಅಗತ್ಯವಿರುವುದಿಲ್ಲ ಎಂದರು.
- ಫಲಿತಾಂಶಗಳ ಬಗ್ಗೆ ಯಾರೋ ಪ್ರಶ್ನಿಸಿದಾಗ, ಅಭ್ಯಾಸಿಗಳ ಸಂಖ್ಯೆ ಹೆಚ್ಚಳವಾಗಬೇಕೆಂದು ಫಲಿತಾಂಶ ಬಯಸುವುದು ತಪ್ಪು, ಆದರೆ ನಾವು ನಮ್ಮ ಕೆಲಸವನ್ನು ಹೃದಯಪೂರ್ವಕವಾಗಿ ಮಾಡಬೇಕೆಂದು ಉತ್ತರಿಸಿದರು.
- ಜೀವನದ ಸುಖ ಸೌಲಭ್ಯಗಳನ್ನು ಬಳಸಿಕೊಳ್ಳುವುದು ಸರಿಯೇ ಎಂಬ ಪ್ರಶ್ನೆಗೆ, ಅವರು ನಾವು ಜೀವನದಲ್ಲಿ ಸವಲತ್ತುಗಳಿಲ್ಲದೆ ಬದುಕಲಾರೆವು ಎಂದರೆ ಅದು ತಪ್ಪು, ಹಾಗೆಯೇ ಎಲ್ಲವೂ ಲಭ್ಯವಿರುವಾಗಲೂ ನಾವು ಬಳಸಬಾರದೆಂಬ ಕಾಠಿಣ್ಯವಿದ್ದರೆ ಅದೂ ತಪ್ಪು. ನಾವು ಎಲ್ಲಾ ಪರಿಸ್ಥಿತಿಗಳಲ್ಲೂ ಸಂತೋಷದಿಂದಿರಬಲ್ಲ ಯಾವುದಕ್ಕೂ ಅಂಟಿಕೊಳ್ಳದ






ಅಹಮದಾಬಾದ್


ಆನಂದ್


ವಡೋದರ

ಮನಸ್ಥಿತಿಯಲ್ಲಿರಬೇಕೆಂದು ವಿವರಿಸಿದರು.

ಸಂಜೆಯ ಸತ್ಸಂಗದ ನಂತರ ಎರಡು ಸುಂದರವಾದ ಕಾರ್ಯಕ್ರಮಗಳು ಅಹಮದಾಬಾದ್ ಕೇಂದ್ರದವರಿಂದ ಪ್ರಸ್ತುತವಾದವು. ಮೊದಲು ಸಂತ ನರಸಿಂಗ ಮೆಹ್ತಾರ ಜೀವನದ ಬಗ್ಗೆ ನಾಟಕ ನಂತರ ಪಂಜು ನೃತ್ಯ. ಗುರುಗಳು ಸಿಸಿಟಿವಿ ಮೂಲಕ ಕುಟೀರದಲ್ಲಿಯೇ ಕುಳಿತು ಈ ಕಾರ್ಯಕ್ರಮಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತ ಪಡಿಸಿದರು. ಅವರು ಅತ್ಯಂತ ಸಂತೋಷದಿಂದಿದ್ದು ಈ ಕಾರ್ಯಕ್ರಮಗಳನ್ನು ನೀಡಿದ ಯುವಕರ ಜತೆ ಕೆಲ ಸಮಯ ಕಳೆದು ನಂತರ ಆ ದಿನದ ವಿಶ್ರಾಂತಿಗೆ ತೆರಳಿದರು.

38ರ ಮುಂಜಾನೆ ಸುಮಾರು 6.30ಕ್ಕೆ ಗುರುಗಳು ಆನಂದ್(ಅಹಮದಬಾದ್ ನಿಂದ 75 ಕಿ.ಮಿ) ಗೆ ಹೊರಟರು, ಅವರನ್ನು ಸುಮಾರು 1000 ಅಭ್ಯಾಸಿಗಳು ಅನುಸರಿಸಿದರು. ಅವರು ಆನಂದ್‌ನಲ್ಲಿ ಸತ್ಸಂಗವನ್ನು ನೆರವೇರಿಸಿ ಒಬ್ಬ ಅಭ್ಯಾಸಿ ಸಹೋದರರ ಮನೆಯಲ್ಲಿ ವಾಸ್ತವ್ಯ ಹೂಡಿದರು. ಗುಜರಾತಿನ ಎಲ್ಲಾ ಪ್ರಶಿಕ್ಷಕರಿಗೂ ಜಿಎಸ್‌ಟಿ ಕಾರ್ಯಾಗಾರವಿದ್ದು ಅದರಲ್ಲಿ ಮಧ್ಯಪ್ರದೇಶ, ರಾಜಸ್ತಾನ ಹಾಗು ಮಹಾರಾಷ್ಟ್ರದಿಂದ ಆಯ್ದ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

29ರಂದು ಆನಂದ್ ನಲ್ಲಿ ಸತ್ಸಂಗ ನೆರವೇರಿಸಿದ ನಂತರ ಗುರುಗಳು ವಡೋದರಕ್ಕೆ ತೆರಳಿದರು. ಆ ವಾರಾಂತ್ಯದಲ್ಲಿ ಗುರುಗಳೊಂದಿಗಿರಲು ನಾಲ್ಕೂ ರಾಜ್ಯಗಳ ಸುಮಾರು 2500 ಅಭ್ಯಾಸಿಗಳು ಅಲ್ಲಿ ನೆರೆದಿದ್ದರು. ಗುರುಗಳು 29ರ ಸಂಜೆಯ ಸತ್ಸಂಗ ಹಾಗು 30ರ ಬೆಳಗಿನ ಮತ್ತು ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು. ವಡೋದರದ ಅಭ್ಯಾಸಿ ಸಹೋದರಿಯರು ಹಾಗು ಮಕ್ಕಳಿಂದ ಎರಡು ನೃತ್ಯ ಕಾರ್ಯಕ್ರಮವಿದ್ದಿತು. ಗುರುಗಳು ನವೆಂಬರ್1ರ ಬೆಳಗಿನ 7.30 ರ ಸತ್ಸಂಗವನ್ನು ತಮ್ಮ ಕುಟೀರದಲ್ಲಿಯೇ ನಡೆಸಿದರು ನಂತರ ಅವರು ಅಹಮದಬಾದ್ ಗೆ ಬಂದು 2ನೇ ತಾರೀಖು ಚೆನ್ನೈಗಾಗಿ 3.20ಕ್ಕೆ ಹೊರಟರು.



## ಚೆನ್ನೈ

ಗುರುಗಳು ತಮ್ಮ ದೀರ್ಘಕಾಲದ ಪ್ರವಾಸದ ನಂತರ ಚೆನ್ನೈಗೆ ಮರಳಿದರು. ವಾಹನ ಸಂದಣಿ ಹೆಚ್ಚಾಗಿದ್ದರಿಂದ ಸ್ವಲ್ಪ ತಡವಾಗಿಯೇ ಆಶ್ರಮ ತಲುಪಿದರು ಮತ್ತು ಬಳಲಿದವರಂತೆ ಕಾಣುತ್ತಿದ್ದರು. ಆದರೂ ಮರುದಿನ ಬೆಳಗಿನ 6ಕ್ಕೆ ಸಿದ್ಧರಾಗಿ ಕುಳಿತಿದ್ದರು. ಅವರು "ನಾನು ಬೆಳಗಿನ 5ಕ್ಕೆ ಎದ್ದು, ಆಯಾಸಗೊಂಡಿರುವೆನಾದ್ದರಿಂದ 7 ಗಂಟೆಯವರೆಗಾದರು ಮಲಗಬೇಕೆಂದು ಅಂದುಕೊಂಡೆ, ನಂತರ ಅದು ಆಯಾಸವಲ್ಲವೆಂದೂ ಕೇವಲ ಸೋಮಾರಿತನವೆಂದು ಅನಿಸಿ ಆ ಭಾವನೆಯನ್ನು ತೊಡೆದು ಎದ್ದೆ" ಎಂದರು. ಈ ವಯಸ್ಸಿನಲ್ಲೂ ಮುಖ್ಯವಾಗಿ ಇಂತಹ ದೀರ್ಘ ಪ್ರವಾಸದ ನಂತರವೂ ಅವರು ತಮ್ಮ ಸಂಕಲ್ಪಶಕ್ತಿಯನ್ನು ಬಳಸಿ ಚೈತನ್ಯ ಭರಿತರಾಗಿ ಎದ್ದು ನಿಲ್ಲುತ್ತಾರೆಂದರೆ ಅದು ನಮ್ಮೆಲ್ಲರಿಗೂ ಒಂದು ಪಾಠ.

ಗುರುಗಳು ಈ ಪ್ರವಾಸದಲ್ಲಿ ಪಡೆದ ಪುಸ್ತಕಗಳನ್ನು ಆಶ್ರಮದ ಗ್ರಂಥಾಲಯಕ್ಕೆ, ತಮ್ಮ ಕೋಣೆಗೆ, ಒಮೆಗಾ ಶಾಲೆಗೆ, ಹಾಗು ಸತ್ಖೋಲ್ ಆಶ್ರಮಕ್ಕೆಂದು ಪ್ರತ್ಯೇಕಿಸುತ್ತಿದ್ದರು. ಸ್ವಯಂಸೇವಕರುಗಳು ಅದರಲ್ಲಿ ಗುರುಗಳಿಗೆ ಸಹಾಯ ಮಾಡುತ್ತಿದ್ದು, ಪುಸ್ತಕಗಳ ಹೆಸರನ್ನು ಅವರುಗಳು ಓದುತ್ತಿದ್ದಂತೆಯೇ ಗುರುಗಳು ಅವುಗಳ ಅಗತ್ಯ ಮತ್ತು ಪ್ರಸ್ತುತತೆಯ ಆಧಾರದ ಮೇಲೆ ಬಹಳ ಎಚ್ಚರಿಕೆಯಿಂದ ವಿಂಗಡಿಸುತ್ತಿದ್ದುದನ್ನು ಯಾರಾದರೂ ಗಮನಿಸಬಹುದಿತ್ತು.

ನವೆಂಬರ 5ನೇ ತಾರೀಖಿನ ಹೊತ್ತಿಗೆ ಚೆನ್ನೈನಲ್ಲಿ ಬಹಳಷ್ಟು ಮಳೆಯಾಗಿ ಲಯನ್ ಗೇಟ್ ಕಡೆಯಿಂದ ಕಾಟೇಜ್ ಕಡೆಗೆ ವಿಪರೀತ ನೀರು ಬರುತ್ತಿದ್ದು ಪ್ರವಾಹದ ಭೀತಿ ತಲೆದೋರಿತ್ತು. ಅಭ್ಯಾಸಿ ಸ್ವಯಂಸೇವಕರುಗಳು ನೀರು ಹರಿವುದನ್ನು ತಡೆಯಲು ಗೇಟ್ ಬಳಿ ಮರಳಿನ ಚೀಲಗಳನ್ನಿಟ್ಟರು. ಗುರುಗಳು



ಮುನ್ನೆಚ್ಚರಿಕೆಯ ಕ್ರಮವಾಗಿ ಕೆಳಗಿನ ಸಾಲುಗಳಲ್ಲಿದ್ದ ಪುಸ್ತಕಗಳನ್ನು ರಟ್ಟಿನ ಡಬ್ಬಗಳಲ್ಲಿರಿಸಿ ಎತ್ತರದ ಸ್ಥಳಕ್ಕೆ ಸಾಗಿಸುವಂತೆ ಸೂಚಿಸಿದರು.

7ನೇ ತಾರೀಖಿನ ಸಂಜೆ ಮಾರಿಶಸ್‌ನ ಅಭ್ಯಾಸಿಗಳೊಂದಿಗೆ ಸಭೆ ಇತ್ತು. ಗುರುಗಳು ಅವರಿಗೆ ಬೈಠಕ್ ನೀಡಿ ನಂತರ ಅವರುಗಳೊಂದಿಗೆ ಕೆಲ ಸಮಯ ಮಾತನಾಡಿದರು. ಅವರು "ಯಾರೂ ತಾವು ಸಾಧಿಸಿದ್ದೇವೆಂದು ತಿಳಿದುಕೊಳ್ಳಬಾರದು. ಪ್ರತಿಯೊಂದು ವಿಚಾರವೂ ಅದರ ಮುಂದಿನದಕ್ಕೆ ಮುನ್ನುಡಿಯಾಗಿದ್ದು ಈ ಪ್ರಕ್ರಿಯೆಯಲ್ಲಿ ನಿಜವಾದ ಅಂತ್ಯವೆಂಬುದು ಇರುವುದೇ ಇಲ್ಲ" ಎಂದರು.

ನವೆಂಬರ 11 ಗುರುಗಳು ಬೆಳಗಿನ 9ರ ಸತ್ಸಂಗ ನಡೆಸುವುದರೊಂದಿಗೆ ಹದಿಮೂರು ವಿವಾಹಗಳನ್ನು ನೆರವೇರಿಸಿ ಅದೊಂದು ವಿಶೇಷ ದಿನವಾಯಿತು. ಧ್ಯಾನ ಮಂದಿರ ತುಂಬಿದ್ದು ಎಲ್ಲರಿಗೂ ಪ್ರಿಯ ಗುರುಗಳನ್ನು ಕಣ್ತುಂಬಿಸಿಕೊಳ್ಳುವ ಅವಕಾಶವಾಗಿತ್ತು. ವಾತಾವರಣ ಸಂತಸಮಯವಾಗಿದ್ದನ್ನು ಎಲ್ಲರೂ ಅನುಭವಿಸುತ್ತಿದ್ದು ಗುರುಗಳು ಸಹ ಉಲ್ಲಸಿತರಾಗಿದ್ದರು.

ಗುರುಗಳೊಂದಿಗೆ ಇರಲು ಶಹಜಹಾನ್‌ಪುರದಿಂದ ಬಂದಿದ್ದ 25–30 ಅಭ್ಯಾಸಿಗಳೊಡನೆ ತಮ್ಮ ಭೇಟಿಯನ್ನು ಬೈಠಕ್ ನೀಡುವುದರೊಂದಿಗೆ ಪ್ರಾರಂಭಿಸಿದರು. ಎಲ್ಲರಿಗೂ ಲಘು ಉಪಾಹಾರದ ವ್ಯವಸ್ಥೆ ಮಾಡಿಸಿದ್ದರು. ಗುರುಗಳು ಎಲ್ಲರೂ ಉಪಾಹಾರ ಸೇವಿಸುವಂತೆ ಉತ್ತಮ ರೀತಿಯಲ್ಲಿ ಉಪಚರಿಸಿದರು. ಅಭ್ಯಾಸಿಗಳು ಪದೇ ಪದೇ ಶಹಜಹಾನ್‌ಪುರಕ್ಕೆ ಬರುವಂತೆ ಒತ್ತಾಯಿಸಿದಾಗ ಅವರು " ನಾನು ಖಂಡಿತವಾಗಿಯೂ ಬರುತ್ತೇನೆ" ಎಂದುತ್ತರಿಸಿದರು. ಆಗಲೇ ಅವರು ಉತ್ತರ ಪ್ರದೇಶದ ವಿವಿಧ ಭಾಗಗಳಿಗೆ ಶಹಜಹಾನ್‌ಪುರವೂ ಒಳಗೊಂಡಂತೆ ಪ್ರವಾಸ ಮಾಡಲು ತೀರ್ಮಾನಿಸಿದರು. ಆದರೆ ಆ ವಾರದಲ್ಲಿ ಮೂರು ಬಾರಿ ಅನಾರೋಗ್ಯಕ್ಕೊಳಗಾಗಿ ಅವರ ಎಲ್ಲಾ ಪ್ರವಾಸ ಕಾರ್ಯಕ್ರಮಗಳು ರದ್ದಾದವು. ಅವರು ಮಣಪಾಕ್ಕಂನಲ್ಲಿಯೇ ಉಳಿದರು.

ಒಂದು ಬೆಳಗ್ಗೆ ತಮ್ಮ ಬಳಿ ಕುಳಿತಿದ್ದ ಅಭ್ಯಾಸಿಗಳಿಗೆ ಬೈಠಕ್ ಪ್ರಾರಂಭಿಸುವ ಮೊದಲು "ಪ್ರಲೋಭನೆಗಳಿಂದ ತಪ್ಪಿಸಿಕೊಳ್ಳಬೇಕಾದರೆ ಅವುಗಳಿಂದ ದೂರವಿರಬೇಕು. ನಿಮಗೇನಾದರೂ ಜಿಲೇಬಿ ತಿನ್ನಬೇಕೆಂಬ ಪ್ರಲೊಭವುಂಟಾದರೆ ಮತ್ತು ಆಗ ನೀವು ಜಿಲೇಬಿ ಅಂಗಡಿಯಲ್ಲಿದ್ದರೆ ನೀವು ಖಂಡಿತವಾಗಿಯೂ ಪ್ರಲೋಭಕ್ಕೊಳಗಾಗುತ್ತೀರಿ. ಇದಕ್ಕಿಂತ ಉತ್ತಮವಾದದ್ದೆಂದರೆ ಪ್ರಲೋಭಗಳುಂಟಾಗಬಹುದಾದ ಸ್ಥಳಗಳಿಗೆ ಹೋಗದಿರುವುದು" ಎಂದರು.

ನವಂಬರ್ 27ರಂದು ಅತೀವ ಮಳೆಯಿದ್ದರೂ ಗುರುಗಳು ಸತ್ಸಂಗ ನಡೆಸಲು ಸಿದ್ಧರಾಗಿದ್ದರು. ಆಶ್ರಮದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿ ಗುರುಗಳು ಇದರಿಂದ ಚಿಂತಿತರಾಗಿದ್ದರು. ಅವರು "ನಾವು ಈ ಆಶ್ರಮವನ್ನು ನಿರ್ಮಿಸುವಾಗ ನನ್ನ ಬಳಿ ಇನ್ನು ಸ್ವಲ್ಪ ಹೆಚ್ಚಿನ ಹಣ ಇದ್ದಿದ್ದರೆ ಇಡೀ ಆಶ್ರಮವನ್ನು ಕೆಲ ಅಡಿಗಳಷ್ಟು ಮೇಲೆತ್ತರಿಸಿರುತ್ತಿದ್ದೆ." ಎಂದರು. ಅವರಿದನ್ನು ವಿವರಿಸುತ್ತಿರುವಾಗ ಅವರ ಸರಳತೆ ಹಾಗು ಪ್ರಾಮಾಣಿಕತೆಯನ್ನು ಗಮನಿಸಬಹುದಿತ್ತು.

ಅಭ್ಯಾಸಿ ದಂಪತಿಗಳೊಬ್ಬರು ಇತ್ತೀಚಿಗಷ್ಟೇ ಯುಎಸ್‌ಎಯಿಂದ ಭಾರತದಲ್ಲೇ ನೆಲೆಸಲು ಹಿಂದಿರುಗಿದ್ದು ಗುರುಗಳನ್ನು ಭೇಟಿ ಮಾಡಲು ಬಂದಿದ್ದರು.ಗುರುಗಳು ಆ ಯುವತಿಗೆ "ನೀನು ಹೀಗೆ ಇಲ್ಲೇ ನೆಲೆಸಲು ನಿರ್ಧರಿಸಿದ್ದು ನಿನಗೆ ಸಂತೋಷವಾಗಿದೆಯಾ?" ಎನ್ನಲು, ಆಕೆ "ನಾನು ಸಂತೋಷದಿಂದಿರುವೆ ಗುರುಗಳೇ" ಎಂದಳು. ಗುರುಗಳು " ನಿನಗೆ ಅಲ್ಲಿ ಹಣ ಸಿಗುತ್ತದೆ. ಇಲ್ಲಿ ಸಂತೋಷ ಸಿಗುತ್ತದೆ. ಹಣ ಮತ್ತು ಸಂತೋಷ ಎಂದೂ ಜತೆಯಾಗಿ ಸಾಗಲಾರವು" ಎಂದರು.

ಗುರುಗಳು 29 ನವಂಬರ್ ರಿಂದ 2 ಡಿಸೆಂಬರ್‌ವರೆಗೆ 'ಗಾಯತ್ರಿ'ಯಲ್ಲಿದ್ದರು. ಶುಕ್ರವಾರ ಸಂಜೆ ಸಮುದ್ರ ತೀರಕ್ಕೆ ಹೋದವರು ಉಸಿರಾಟದ ಸಮಸ್ಯೆಯಿಂದಾಗಿ ಮನೆಗೆ ಬಂದು ವಿಶ್ರಮಿಸಿದರು.


**ಡಿಸೆಂಬರ್ 3, 2011 :** ಗುರುಗಳು ಆಶ್ರಮಕ್ಕೆ ಬೆಳಗಿನ 9.15ಕ್ಕೆ ಬಂದರು. ಅವರಿಗೆ 'ಮಹಾಭಾರತ ಕಥಾ'ದ ಹೊಸ ಡಿವಿಡಿ ಸೆಟ್ ದೊರೆತು, ಅದರಲ್ಲಿ ಹಿಂದಿನ ಧಾರಾವಾಹಿಯಲ್ಲಿ ಸೇರಿಲ್ಲದ ಅನೇಕ ಭಾಗಗಳು ಸೇರಿದ್ದು, ಗುರುಗಳು ಅದನ್ನು ವೀಕ್ಷಿಸಲು ಬಹಳ ಆಸಕ್ತಿ ತೋರಿಸಿದರು.

ಡಿಸೆಂಬರ್‌ನ ಮೊದಲ ವಾರದಲ್ಲಿ ಗುರುಗಳೊಂದಿಗೆ ಇರಲು ಗುಜರಾತ್‌ನಿಂದ 300 ಅಭ್ಯಾಸಿಗಳು ಬಂದಿದ್ದರು. ಒಂದು ಸಂಜೆ ಸತ್ಸಂಗದ ನಂತರ ಇಟಲಿಯ 20 ಅಭ್ಯಾಸಿಗಳು ಗುರುಗಳನ್ನು ನೋಡಲು ಬಂದು ಹಜಾರದಲ್ಲಿ ಕಾಯುತ್ತಿದ್ದರು. ಅವರುಗಳು ತಾಳ್ಮೆಯಿಂದ ಕಾಯುತ್ತಿದ್ದು ಅಲ್ಲೊಂದು ವಾತಾವರಣ ನಿರ್ಮಾಣವಾಗಿದ್ದನ್ನು ಗಮನಿಸಬಹುದಿತ್ತು. ಗುರುಗಳು ತಮ್ಮ ಕಛೇರಿ ಕೆಲಸ ಮುಗಿಸಲು ಹೋಗುವವರಿದ್ದು, ತಮ್ಮ ಕೊಠಡಿಯಿಂದ ಹೊರಬಂದವರು ತಮ್ಮ ಯೋಜನೆಯನ್ನು ಬದಲಾಯಿಸಿ ಇಟಲಿಯ ಅಭ್ಯಾಸಿಗಳೊಡನೆ ಮಾತನಾಡಲು ತೊಡಗಿದರು. ಅವರುಗಳೊಡನೆ ಸ್ವಲ್ಪ ಸಮಯ ಮಾತನಾಡಿ ನಂತರ ಬೈಠಕ್ ನೀಡಿದ್ದು ಅಲ್ಲಿದ್ದ ಎಲ್ಲರಿಗೂ ಅತ್ಯಂತ ಸಂತಸದಾಯಕವಾಗಿತ್ತು.

10 ಮತ್ತು 11 ರಂದು 'ಹೃದಯವಾಣಿ'ಯ ಬಗ್ಗೆ ವಾರಂತ್ಯದ ಕಾರ್ಯಾಗಾರವಿದ್ದು, ಅಲ್ಲಿ ಉದ್ಭವವಾದ ಪ್ರಶ್ನೆಯೊಂದನ್ನು ಗುರುಗಳ ಮುಂದಿಡಲಾಯಿತು. "ನಾವು ಹೃದಯದಿಂದ ಮಾತನಾಡಬೇಕೆಂದುಕೊಳ್ಳುವಾಗ ನಾವು ಯಾವುದೇ ಸಿದ್ಧತೆಗಳಿಲ್ಲದೆ ತತ್‌ಕ್ಷಣಕ್ಕೆ ಏನು ತೋಚುತ್ತದೋ ಹಾಗೆ ಮಾತನಾಡುವುದೋ"? ಅದಕ್ಕೆ ಗುರುಗಳು, ಯಾವುದೇ ಭಾಷಣ ಮಾಡಬೇಕಾದರೂ ಸಿದ್ಧತೆ ಅಗತ್ಯವಾದದ್ದು. ಮಾತನಾಡುವ ಒಂದೆರೆಡು ದಿನಗಳ ಮೊದಲು ವಿಷಯಕ್ಕೆ ಸಂಬಂದಿಸಿದ ವಿಚಾರಗಳು ನಿಮ್ಮ ತಲೆಯಲ್ಲಿ ಕೂರಲು, ಒಳಗೆ ಮಥಿಸಲು ಬಿಡಿ. ಪಾಶ್ಚಿಮಾತ್ಯರಂತೆ ಮುಖ್ಯಾಂಶಗಳನ್ನ ಬರೆದಿಡಬೇಕಾದ್ದೇನಿಲ್ಲ. ಹಾಗೆ ಬರೆವುದು ವಿಷಯದ ವ್ಯಾಪ್ತಿಗೆ ಮಿತಿಯನ್ನು ಕಠಿಣತೆಯನ್ನೂ ತರುವುದು ಮತ್ತು ನಿರರ್ಗಳತೆಯು ಹೊರಟುಹೋಗುವುದು. ಅದರ ಬದಲು ವಿಷಯವು ನಿಮ್ಮೊಳಗೆ ಹೋಗಿ ಅಲ್ಲೇ ಸಿದ್ಧತೆ ನಡೆಯಲು ಅನುವು ಮಾಡಿಕೊಡಿ. ಇದರಿಂದ ಮಾತನಾಡುವ ಸಮಯ ಬಂದಾಗ ನೀವು ಹೃದಯದಿಂದ ಮಾತನಾಡಲು ಸಾಧ್ಯವಾಗುವುದು. ಹಾಗೆಯೇ ಕೇವಲ ಹೃದಯದಿಂದ ಮಾತನಾಡಿದರೆ ಸಾಲದು ನೀವು ಮಾತನಾಡುವಾಗ ನಿಮ್ಮ ಜೀವವನ್ನೇ ಅದರೊಳಗೆ ತುಂಬಬೇಕು ಎಂದರು.

15ರಂದು ಗುರುಗಳು ಒಂಗೋಲ್ ಕೇಂದ್ರದಿಂದ ಬಂದಿದ್ದ ಅಭ್ಯಾಸಿಗಳಿಗೆ ಸತ್ಸಂಗ ನಡೆಸುವ ಏಕಮಾತ್ರ ಕಾರಣಕ್ಕೆ ಗಾಯತ್ರಿಯಿಂದ ಬಂದಿದ್ದರು.





**ಡಿಸೆಂಬರ್ 19, 2011:** ದಕ್ಷಿಣ ಆಫ್ರಿಕಾ ಮತ್ತು ಓಷಿಯಾನಿಯಾದ ಅಭ್ಯಾಸಿಗಳು ಸಭೆಯ ಕಾರಣ ಆಶ್ರಮದಲ್ಲಿ ತಂಗಿದ್ದರು. ಗುರುಗಳು ಅವರಲ್ಲಿ ಅನೇಕರನ್ನು ಭೇಟಿ ಮಾಡಲು ಮುಂಜಾನೆ 8 ಘಂಟೆಯಿಂದ 11:30 ರವರೆಗೂ ಸಮಯ ಮೀಸಲಿಟ್ಟರು. ಅವರು ದಣಿದಿದ್ದರೂ ಎಲ್ಲರನ್ನೂ ಭೇಟಿಯಾಗುವ ಇಚ್ಛೆ ಅವರಿಗಿತ್ತು. ಅವರು ತಮಾಷೆ ಮಾಡುತ್ತಾ "350 ಜನರಲ್ಲಿ ನಾನು 300 ಜನರನ್ನು ಆಗಲೇ ಭೇಟಿಯಾಗಿದ್ದಿರಬೇಕು" ಎಂದರು. ಸಂಜೆ ಪುನಃ 50 ಅಭ್ಯಾಸಿಗಳು ಹಜಾರದಲ್ಲಿ ಅವರಿಗಾಗಿ ಕಾಯುತ್ತಿದ್ದರು. ಗುರುಗಳು ತಮ್ಮ ಕಚೇರಿಯಿಂದ ಹೊರಬಂದು ಅವರನ್ನು ನೋಡಿದೊಡನೆ, "ದಯವಿಟ್ಟು ಸಹನೆಯಿಂದಿರಿ, ಕೆಲವೇ ನಿಮಿಷಗಳಲ್ಲಿ ನಾನು ಹಿಂದಿರುಗುತ್ತೇನೆ" ಎಂದರು. ಅವರು ನಂತರ ಎಲ್ಲರಿಗಾಗಿ ಸತ್ಸಂಗ ನಡೆಸಿಕೊಟ್ಟರು. ಅಲ್ಲಿ ಒಂದು ಘಂಟೆಯಿಂದ ಕಾಯುತ್ತಿದ್ದವರಿಗೆ ಅದು ಮುದ ನೀಡಿತು.

**ಡಿಸೆಂಬರ್ 24, 2011:** ಗುರುಗಳು ಆಶ್ರಮಕ್ಕೆ ಬಂದು ಕೆಲ ಕಾಲ ಬಿಸಿಲಿನಲ್ಲಿ ಕುಳಿತಿದ್ದರು. ಅವರು ಇತ್ತೀಚೆಗೆ ಬಾಬೂಜಿ ಮಹಾರಾಜರಿಂದ ತಾವು ಪಡೆದ ಸಂದೇಶದ ಕುರಿತು ಮಾತನಾಡಿದರು. ಆ ಸಂದೇಶ ಪಡೆಯುವ ಹೊತ್ತಿಗೆ ತಾವು ಹೇಗೆ ತಮ್ಮ ಪ್ರವಾಸವನ್ನು ಯೋಜಿಸಿದ್ದು ಟಿಕೆಟ್ ಸಹ ಕಾಯ್ದಿರಿಸುವವರಿದ್ದರೆಂದು ವಿವರಿಸಿದರು. ತಮ್ಮ ಗುರುಗಳ ಆದೇಶವನ್ನು ಮನ್ನಿಸುತ್ತಾ ಅವರು ತಮ್ಮ ಪ್ರಯಾಣವನ್ನು ರದ್ದುಗೊಳಿಸಬೇಕಾಯಿತು.


ಅಂದು ಕ್ರಿಸ್ಮಸ್ ಹಿಂದಿನ ದಿನವಾದ್ದರಿಂದ ಅಭ್ಯಾಸಿಗಳ ಗುಂಪೊಂದು ಗುರುಗಳ ಕುಟೀರದಲ್ಲಿ ಅವರಿಗಾಗಿ ಕ್ರಿಸ್ಮಸ್ ಹರ್ಷಗೀತೆಯನ್ನು ಹಾಡಿದರು. ಅವರು ಹಾಡತೊಡಗಿದೊಡನೆಯೇ ಗುರುಗಳು ತಮ್ಮ ಶಯ್ಯಾಗಾರದಿಂದ ಹೊರಬಂದು ಅವರೊಂದಿಗೆ ಗೀತೆಯನ್ನು ಗುನುಗುತ್ತಾ ಹಜಾರಕ್ಕೆ ಬಂದುದು ಅಲ್ಲಿ ನೆರೆದವರೆಲ್ಲಗೂ ಸಂತಸ ತಂದಿತು. ಗುರುಗಳು "ಈ ಹಿಂದೆ ಈ ಹಾಡನ್ನು ನಾನು ಕ್ರೈಸ್ಟ್‌ನಲ್ಲಿ ಕೇಳಿದ್ದೆ" ಎಂದು ಅಲ್ಲಿ ನೆರೆದಿದ್ದವರೊಡನೆ ಕೆಲ ಸಮಯ ಕಳೆದರು. ಹಾಡುಗಾರರಿಗೆಲ್ಲ ಅವರು ಸಿಹಿಯನ್ನು ಹಂಚಿದರು.

ಕ್ರಿಸ್ಮಸ್‌ದಂದು ಗುರುಗಳು ಧ್ಯಾನಮಂದಿರಕ್ಕೆ ತೆರಳುವಾಗ ಮಕ್ಕಳೆಲ್ಲ ಕೆಂಪು-ಬಿಳಿ ಉಡುಗೆಯಲ್ಲಿ ಹಾದಿಯುದ್ದಕ್ಕೂ ನಿಂತಿದ್ದರು. ಅವರು ತಮ್ಮ ಗಾಲ್ಫ್‌ಗಾಡಿಯಲ್ಲಿ ನಿಧಾನವಾಗಿ ಹೋಗುತ್ತಾ ಅವರೆಲ್ಲರನ್ನೂ ಸಂತೋಷದಿಂದ ಭೇಟಿಯಾದರು.

**ಡಿಸೆಂಬರ್ 26:** ತಮ್ಮ ಪ್ರಯಾಣದ ಇತ್ತೀಚಿನ ನಿರ್ಬಂಧದ ನಂತರ ಗುರುಗಳು ಬಿಡುವಾಗಿದ್ದಾಗಲೆಲ್ಲ ಬೆಳಗಿನ 9ಘಂಟೆಯ ಸತ್ಸಂಗವನ್ನು ನಡೆಸಿಕೊಡುವುದಾಗಿ ನಿರ್ಧರಿಸಿದ್ದಾರೆ. ಹಾಗೆಯೇ ಅವರು ತಾವು ಸಾಧ್ಯವಾದಷ್ಟೂ ಧ್ಯಾನಮಂದಿರದಲ್ಲಿ ಎಲ್ಲರನ್ನೂ ಭೇಟಿಯಾಗುವುದಾಗಿ ಹಾಗೂ ಅಭ್ಯಾಸಿಗಳೂ ಸಹ ಕುಟೀರದ ಸುತ್ತ ಗುಂಪುಗೂಡದೆ ಅವರನ್ನು ಅಲ್ಲಿಯೇ ಭೇಟಿಯಾಗಲು ಯತ್ನಿಸಬೇಕು ಎಂದು ಹೇಳಿದರು.

ಒಂದು ಮುಂಜಾನೆಯ ಸತ್ಸಂಗದ ನಂತರ ಗುರುಗಳು ಹೊರಗೆ ಕುಳಿತು ಬಹಳ ಸಮಯ ಮಾತನಾಡಿದರು. "ವಯಸ್ಸು ಐವತ್ತಾಗುತ್ತಿದ್ದಂತೆ ಅದೇಕೆ ಮನೋಬಲ ವಿಫಲವಾಗುತ್ತದೆ? ಏಕೆಂದರೆ ಎಲ್ಲಿ ನಾವು ಸಂಕಲ್ಪವನ್ನು ಸ್ವಪ್ರಗತಿಗಾಗಿ ಉಪಯೋಗಿಸಬೇಕಿದೆಯೋ ಅದರ ಹೊರತು ನಾವು ಬಯಕೆಗಳನ್ನು ತೀರಿಸಲು ಬಳಸುವುದರಿಂದ ಮನೋಬಲವು ದುರ್ಬಲವಾಗುತ್ತದೆ." ಎಂದು ಅವರು ಮಗುವಿನ ಉದಾಹರಣೆಯನ್ನು ನೀಡುತ್ತಾ, "ನೀವು ಮಗುವನ್ನು ಆಟಿಕೆ ಅಂಗಡಿಗೆ ಕರೆದೊಯ್ದು ಅದರ ಬಯಕೆಯನ್ನು ನಿಯಂತ್ರಿಸಲು ಹೇಳಬಾರದು." ಅವರು ತಮ್ಮ ಸ್ವಂತ ಉದಾಹರಣೆಯ ಬಗ್ಗೆ ಮಾತನಾಡುತ್ತಾ ಒಂದು ವರ್ಷದ ಹಿಂದೆ ಅವರು ಮುಂಜಾನೆ ಬಹಳ ಹೊತ್ತಿನ ತನಕ ಮಲಗಿದ್ದು ತಡವಾಗಿ ಏಳುತ್ತಿದ್ದರು. ನಂತರ ಅವರು ಅದರಿಂದ ಹೊರಬರಲು ನಿರ್ಧರಿಸಿ, ಈಗ ನಿತ್ಯವೂ 4:30ರಿಂದ 5:00ರ ನಡುವೆ ಎಚ್ಚರಗೊಳ್ಳುತ್ತಾರೆ. ಅವರೆಂದರು, " ನನ್ನ ವಯಸ್ಸಿನ ವ್ಯಕ್ತಿಗೆ ಸರ್ವವೂ ನಾಶವಾದಂತೆ, ವಾಸ್ತವದಲ್ಲಿ ನಾನು ಕೇವಲ ಸಂಕಲ್ಪಬಲದ ಮೇಲೆ ನಡೆದಿದ್ದೇನೆ. ನಿಯಮಿತವಾಗಿ, ನಾನು ಒಂದೆರಡು ಬೈಠಕುಗಳು, ಒಂದೆರಡು ಪ್ರಶಿಕ್ಷಕರ ಬೈಠಕುಗಳು ಮತ್ತು ಸತ್ಸಂಗ ಎಲ್ಲವನ್ನೂ ಮುಂಜಾನೆ ನೀಡುತ್ತೇನೆ. ನಂತರ ಈಮೇಲ್‌ಗಳನ್ನೂ ನೋಡುತ್ತೇನೆ. ಅದೂ ಕೆಲವಲ್ಲ, ಸುಮಾರು 40ರಷ್ಟು".

ಪೂರ್ವ ಕರಾವಳಿಯಲ್ಲಿ ಅಪ್ಪಳಿಸಿದ ಚಂಡಮಾರುತವು ನಗರದಲ್ಲಿ ಭಾರೀ ಮಳೆ ಮತ್ತು ಗಾಳಿ ತಂದಿತು. ಆಶ್ರಮದ ಆವರಣವು ಸಂಪೂರ್ಣ ನೆನೆದು ಪ್ರವಾಹದ ಆತಂಕ ತಂದಿತ್ತು. ಅನೇಕ ಅಭ್ಯಾಸಿಗಳು ಮಣಪ್ಪಾಕ್ಕಂಗೆ ಬರತೊಡಗಿದ್ದರಿಂದ ಆಶ್ರಮಕ್ಕೆ ಬರದಿರುವಂತೆ ಸುತ್ತೋಲೆಯನ್ನು ಕಳುಹಿಸಲಾಯಿತು. ಅದೃಷ್ಟವಶಾತ್ ಚಂಡಮಾರುತವು ದೂರಸರಿದಿದ್ದರಿಂದ ವಾತಾವರಣವು ಬೇಗ ಸುಸ್ಥಿತಿಗೆ ಬಂದಿತು.







## ಮಾರಿಷಸ್‌ನ ಅಭ್ಯಾಸಿಗಳಿಗಾಗಿ ಸಭೆ

### 7ರಿಂದ 14 ನವೆಂಬರ್, 2011

ಇಪ್ಪತ್ತೇಳು ಅಭ್ಯಾಸಿಗಳು ಮತ್ತು ಎಂಟು ಮಕ್ಕಳ ತಂಡವು ನವೆಂಬರ್ 6ರಂದು ಮಣಪ್ಪಾಕ್ಕಂಗೆ ಬಂದಿಳಿದರು. ಗುರುಗಳು ನವೆಂಬರ್ 7ರಂದು ಅವರನ್ನು ತಮ್ಮ ಕುಟೀರದಲ್ಲಿ ಎದುರುಗೊಂಡು ಅವರಿಗೆ ಸಂಜೆ 4:45ಕ್ಕೆ ಬೈಠಕನ್ನು ನೀಡಿದರು. ನಂತರ ಚಹಾ–ಲಘು ಉಪಾಹಾರ ನೀಡಲಾಯಿತು.

ಎಲ್ಲಾ ಅಭ್ಯಾಸಿಗಳೂ ಸಭೆಯ ಕಾಲಾವಧಿಯಲ್ಲಿ ಎರಡು ವ್ಯಕ್ತಿಗತ ಬೈಠಕನ್ನು ಪಡೆದರು. 8ರಿಂದ 13ರ ತನಕ ಸಭೆಯು ಸ್ವ–ಪರ್ಯಾಲೋಚನೆ ಮತ್ತು ಸಮೂಹಚರ್ಚೆಗೆ ಗ್ರಾಸವಾಗತಕ್ಕ ವಿಷಯಗಳೊಂದಿಗೆ ನಡೆಸಲಾಯಿತು. ಸಹಜಮಾರ್ಗ ಸಾಧನಾ ತರಬೇತಿ ತಂಡ ಮತ್ತು ಸೋ. ಡಾಲಿಯವರ ಪ್ರಸ್ತುತಿಗಳು ಫಲದಾಯಕವಾಗಿದ್ದವು. ಸಮೂಹಚರ್ಚೆಯಲ್ಲಿ ಪ್ರತೀ ಅಭ್ಯಾಸಿಯೂ ತಮ್ಮ ವಿಷಯಜ್ಞಾನ ಹಂಚಿಕೊಳ್ಳಲು ಸಹಕಾರಿಯಾಯಿತು. ವಿವಿಧ ತಂಡಗಳ ಪ್ರಸ್ತುತಿಗಳ ನಂತರ ಗುರುಗಳ ಉಪನ್ಯಾಸಗಳ ವಿಡಿಯೋ ಪ್ರದರ್ಶಿಸಲಾಯಿತು.

ಸೋದರರಾದ ವಿ.ಕಣ್ಣನ್, ಎ.ಪಿ.ದೊರ್ರೈ ಮತ್ತು ಕಮಲೇಶ್ ಪಟೇಲ್‌ರವರು ಸಹಜಮಾರ್ಗದ ಕುರಿತು ಆಡಿದ ಮಾತುಗಳು ಅಭ್ಯಾಸಿಗಳ ಪ್ರಗತಿಗೆ ಮತ್ತು ಮಾರಿಷಸ್‌ನಲ್ಲಿ ಮಿಷನ್ನಿನ ಬೆಳವಣಿಗೆಗೆ ಸಹಕಾರಿಯಾಗುವಂತಿತ್ತು. ಸೋ. ಶರತ್‌ರವರು ಸಮಾಜನಿರ್ಮಾಣದ ಕುರಿತು ಪ್ರಸ್ತುತಿಯನ್ನು ನೀಡಿದರು ಹಾಗು ಅದಕ್ಕಾಗಿ ಮಾರಿಷಸ್‌ನಲ್ಲಿ ಮಾಡಬೇಕಾದ ಕಾರ್ಯಸೂಚಿಯನ್ನು ನಿರ್ಧರಿಸಲಾಯಿತು.

ಸೋ. ಕಮಲೇಶ್‌ರವರು ತಮ್ಮ ಉಪನ್ಯಾಸದಲ್ಲಿ ಹೇಳಿದರು, ಅನೇಕರು ತಾವು ಮನೆಗೆ ಹಿಂತಿರುಗಿದಾಗ ಇದೇ ಮನಃಸ್ಥಿತಿಯನ್ನು ಹೇಗೆ ಕಾಯ್ದುಕೊಳ್ಳುವುದೆಂದು ಕೇಳುತ್ತಾರೆ. ನಾವು ಆ ಸ್ಥಿತಿಯನ್ನು ಬೆಳೆಯಲು ಬಿಡಬೇಕು. ಗುರುಗಳು ನಮ್ಮ ಹೃದಯದಲ್ಲಿ ಆಧ್ಯಾತ್ಮವನ್ನು ಬಿತ್ತಿರುವಾಗ ಅದನ್ನು ಬೆಳೆಯಲು ಬಿಡಬೇಕು. ಆ ಮನಃಸ್ಥಿತಿಯು ನಮ್ಮ ಆಲೋಚನೆ, ಮಾತು ಹಾಗೂ ಕೃತ್ಯಗಳಲ್ಲಿ ಬಿಂಬಿತವಾಗಬೇಕು. ಹೊಸ ಅಭ್ಯಾಸಿಗಳನ್ನು ಮಿಷನ್ನಿಗೆ ಕರೆತರುವುದು ಮತ್ತು ಬೆಂಬಲ ನೀಡುವುದು ಪ್ರತೀ ಅಭ್ಯಾಸಿಯ ಕರ್ತವ್ಯವೆಂದೂ ಅವರು ಹೇಳಿದರು.

ಅಭ್ಯಾಸಿಗಳು ಗುರುಗಳೊಂದಿಗೆ ನವೆಂಬರ್ 14ರಂದು ಸಂಕ್ಷಿಪ್ತಭೇಟಿ ನಡೆಸಿದಾಗ ಅವರು ಸುಖಪ್ರಯಾಣವನ್ನು ಹಾರೈಸಿದರು. ಅವರು ತಮ್ಮ ವಯಸ್ಸಿನ ಮಿತಿಯ ಕಾರಣ ಮಾರಿಷಸ್‌ಗೆ ಭೇಟಿ ನೀಡಲು ಸಾಧ್ಯವಾಗದಿದ್ದರೂ "ನನ್ನನ್ನು ನಿಮ್ಮೊಂದಿಗೆ ಕರೆದೊಯ್ಯಿರಿ, ನಿಮಗೆ ಅರ್ಥವಾಯಿತೆಂದು ಭಾವಿಸುತ್ತೇನೆ" ಎಂದರು. ಇದು ನಾವು ಸದಾ ಅವರೊಂದಿಗಿರಬೇಕೆಂದು ನಮಗೆ ತಿಳಿಸುತ್ತದೆ.

## ಓಷಿಯಾನಿಯಾ ಮತ್ತು ದಕ್ಷಿಣ ಆಫ್ರಿಕಾ ಸಭೆ

### 16–22 ಡಿಸೆಂಬರ್ 2011

### "ನಾನೆಂದಿಗೂ ಅವರದಾಗಿರುವೆ, ಆದರೆ ಅವರು ನನ್ನವರಾಗಿರುವರೇ?"

ತಲುಪಿ ಎರಡು ದಿನಗಳಾದರೂ ಗುರುಗಳನ್ನು ಭೇಟಿಯಾಗದಿರುವುದು ಅಭ್ಯಾಸಿಗಳಲ್ಲಿ ಮೌನವಾಗಿ ತಮ್ಮೊಳಗೆ ಅವರನ್ನು ಕಾಣುವುದಕ್ಕೆ ಎಡೆ ಮಾಡಿಕೊಟ್ಟಿತ್ತು. ಸಭೆಯ ವಿಷಯವೂ ಸಹ ತಮ್ಮೊಳಗೆ ಅವರನ್ನು ಹುಡುಕುವುದರೊಂದಿಗೆ "ನಾವು ಅವರನ್ನು ಸಂಪೂರ್ಣವಾಗಿ ನಮ್ಮವರನ್ನಾಗಿಸಿಕೊಂಡಿದ್ದೇವೆಯೇ" ಎಂದು ಯೋಚನೆ ಮಾಡುವಂತಿತ್ತು.

ಭಾನುವಾರ, 18ರಂದು ಗುರುಗಳ ಸತ್ಸಂಗದ ನಂತರ ಸಭೆಯು ಉಪನ್ಯಾಸಗಳಿಂದ ಪ್ರಾರಂಭಗೊಂಡಿತು. ಸೋ. ಸಂತೋಷ್‌ರವರು 'ಹೃದಯವಾಣಿ' ಬಗ್ಗೆ ಮಾತನಾಡಿದರು. ಗುರುಗಳು ನಮ್ಮ ದೂರದೃಷ್ಟಿಯು ಅವರಂತೆ ಇರಬೇಕೆಂದು ಬಯಸುತ್ತಾರೆ ಎಂದು ಹೇಳಲಾಯಿತು. ಮರುದಿನ ಸೋ. ಕೃಷ್ಣರವರು 'ಭ್ರಾತೃತ್ವ'ದ ಬಗ್ಗೆ ಮಾತನಾಡುತ್ತಾ ನಮ್ಮ ಯೋಚನಾತರಂಗಗಳು ಗುರುಗಳೊಂದಿಗೆ ಅನುರಣಿಸುವುದರ ಪ್ರಾಮುಖ್ಯತೆಯನ್ನು ವಿವರಿಸಿದರು. 20ರಂದು ಸೋ. ಕಮಲೇಶ್‌ರವರು ನಿಯಮಿತ ಸಾಧನೆಯನ್ನು ವಿವರಿಸಿದರು.

ಡಿಸೆಂಬರ್ 21ರಂದು ಗುರುಗಳು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನ ವಾರ್ಷಿಕ ಸಾಮಾನ್ಯ ಸದಸ್ಯರಸಭೆಯನ್ನು ಭೇಟಿಯಾದರು. ಅವರು ನಾವು ರಾಷ್ಟ್ರೀಯತೆಯ ಭೇದ ಮರೆತು ಒಂದಾಗಬೇಕೆಂದು ಹೇಳಿದರು. ಕಲ್ಪನೆ ಮತ್ತು ವಾಸ್ತವಿಕತೆಯ ಕುರಿತು ಮಾತನಾಡುತ್ತಾ ಅವರು ಎಂದಿಗೂ ಆಸ್ಟ್ರೇಲಿಯಾದ ಕರಾವಳಿಯಲ್ಲಿ ವಾಹನಚಾಲನೆ ಮಾಡಬೇಕೆಂದುಕೊಂಡರೂ ವಾಸ್ತವವಾಗಿ ಅವರ ವಯಸ್ಸಿನ ಕಾರಣ ಪ್ರಯಾಣ ಮಾಡುವಂತಿಲ್ಲ ಎಂದರು. ನಾವು ನಮ್ಮ ಜೀವನಗಳಲ್ಲಿಯೂ ಕಲ್ಪನೆ ಮತ್ತು ವಾಸ್ತವಿಕತೆಯನ್ನು ತಿಳಿದುಕೊಳ್ಳಬೇಕು. ಭಾಗಿಗಳೊಂದಿಗೆ ಗುರುಗಳು ಭೋಜನ ಮಾಡಿದರು ಹಾಗೂ ಅವರುಗಳಿಗೆಂದೇ ವಿಶೇಷವಾಗಿ ಬರ್ಗರ್ ಮತ್ತು ಚಿಪ್ಸ್‌ನ ವ್ಯವಸ್ಥೆ ಮಾಡಲಾಗಿತ್ತು.

ಓಷಿಯಾನಿಯ ಮತ್ತು ದ.ಆಫ್ರಿಕಾ ಯುವ ಸಭೆಯನ್ನು ಸುಮಾರು 80 ಯುವಜನರಿಗಾಗಿ "ಸದ್ಗುರುವಿನ ಅಡಿಗಳ ಜಾಡಿನಲ್ಲಿ" ವಿಷಯದೊಂದಿಗೆ ಡಿಸೆಂಬರ್ 17–20ರವರೆಗೆ ಆಯೋಜಿಸಲಾಗಿತ್ತು. ಭಾಗಿಗಳು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ದ.ಆಫ್ರಿಕಾದಿಂದ ಅಲ್ಲದೆ ಭಾರತದ ಕೆಲವರು ಸಹ ಜೊತೆಗೂಡಿದರು. ನಾಲ್ಕು ದಿನದ ಸಭೆಯು ಉಪನ್ಯಾಸಗಳು, ಚಟುವಟಿಕೆಗಳು ಮತ್ತು ಸತ್ಸಂಗಗಳನ್ನೊಳಗೊಂಡಿತ್ತು. ಕೊನೆಯ ದಿನದಂದು ಪ್ರತೀ ಗುಂಪೂ ಸಹ ಕಿರುನಾಟಕ, ಹಾಡು ಅಥವಾ ಚಟುವಟಿಕೆಗಳನ್ನು ಪ್ರದರ್ಶಿಸಿತು. ತೆರೆದ ಮನದ ಮಾತುಗಳು ಪ್ರತಿಯೊಬ್ಬರೂ ಮನದಾಳದಿಂದ ಮಾತನಾಡಲು ಪ್ರೇರೇಪಿಸಿತು. 'ನಾವೆಲ್ಲ ಒಂದೇ' ಭಾವನೆಯು ಬಲವಾಯಿತು. ಯುವಜನರು ಚರ್ಚಿಸಲು, ಆಲೋಚನೆಗಳನ್ನು ಹಂಚಿಕೊಳ್ಳುವ ಅವಕಾಶ ದೊರೆತಿದ್ದಕ್ಕಾಗಿ ಸಂತಸ ಪಟ್ಟರು. ಗುರಿಯು ಗುರುಗಳು ನಾವೇನಾಗಬೇಕೆಂದು ಬಯಸುತ್ತಾರೋ ಹಾಗಾಗುವುದು, ಪ್ರೇಮದಿಂದ ಸಹಬಾಳ್ವೆ ಮತ್ತು ಕಾರ್ಯಸಾಧನೆ ಮಾಡುವುದು ಆಗಿರುತ್ತದೆ.



## ಅಭ್ಯಾಸಿಗಳ ವಿಚಾರ ಸಂಕಿರಣ

### ರಾಂಚಿ, ಜಾರ್ಖಂಡ್

ಅಕ್ಟೋಬರ್ 28, 2011ರಂದು ರಾಂಚಿಯ ಅಭ್ಯಾಸಿಗಳಿಗಾಗಿ ಚರ್ಚೆಯೊಂದನ್ನು ಆಯೋಜಿಸಲಾಗಿತ್ತು. ಅಭ್ಯಾಸಿಗಳು ಮೂರು ತಂಡಗಳಾಗಿ ವಿಂಗಡಣೆಗೊಂಡು ಅಭ್ಯಾಸಿಗಳ ಸಂಖ್ಯೆ ಮತ್ತು ಗುಣಮಟ್ಟವನ್ನು ಹೇಗೆ ಹೆಚ್ಚಿಸಬೇಕೆನ್ನುವ ಬಗ್ಗೆ ಚರ್ಚಿಸಿದರು. ಇದರಿಂದ ಅನೇಕ ಅಂಶಗಳು ಹೊರಬಂದವು. ಅಭ್ಯಾಸಿಗಳು ನಿಯಮಿತವಾಗಿ ವೈಯಕ್ತಿಕ ಬೈಠಕುಗಳನ್ನು ತೆಗೆದುಕೊಳ್ಳುವಂತೆ, ಭಂಡಾರಗಳಲ್ಲಿ ಪಾಲ್ಗೊಳ್ಳುವಂತೆ ಮತ್ತು ತಪ್ಪದೆ ಭಾನುವಾರದ ಸತ್ಸಂಗಗಳಿಗೆ ಬರುವಂತೆ ಪ್ರೋತ್ಸಾಹಿಸಬೇಕು ಎಂದು ನಿರ್ಧರಿಸಲಾಯಿತು. ಪೂರ್ಣ ದಿನದ ಕಾರ್ಯಕ್ರಮಗಳು ಮತ್ತು ಗೃಹಕೂಟಗಳನ್ನು ಪೂರ್ಣ ಸಿದ್ಧತೆಯೊಂದಿಗೆ ಅಚ್ಚುಕಟ್ಟಾಗಿ ನಡೆಸಿಕೊಡಬೇಕು ಎಂದು ನಿರ್ಧರಿಸಿದರು. ಸೋ.ರಾಕೇಶ್ ಮತ್ತು ಸೋ.ಕಂಚನ್‌ರವರ 'ಪ್ರೇಮಭರಿತ ಸೇವೆ' ಕುರಿತ ಕೆಲವು ಮಾತುಗಳೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

## ಗೃಹಕೂಟಗಳು

### ದುರ್ಗಾಪುರ್, ಪಶ್ಚಿಮ ಬಂಗಾಳ



ನವೆಂಬರ್ 13, 2011ರಂದು ಸೋ. ಅನಿತಾ ಜೈನ್ ಮತ್ತು ಸೋ. ಅರುಣ್ ಲಾಠಿಯಾರವರು ದುರ್ಗಾಪುರದ ಸೋ.ಪರಿಮಲ್ ಮತ್ತು ಇತರೆ ಅಭ್ಯಾಸಿಗಳೊಡಗೂಡಿ 'ಸಹಜಮಾರ್ಗ ಸಾಧನೆ ಮತ್ತುಪದ್ಧತಿ' ಬಗ್ಗೆ ಚರ್ಚೆಯನ್ನು ಸೋ. ಎನ್.ಪಿ.ಚಕ್ರಬರ್ತಿಯವರ ನಿವಾಸದಲ್ಲಿ ಆಯೋಜಿಸಿದ್ದರು. ಸಹಜಮಾರ್ಗ ಸಾಧನೆ ಮತ್ತು ಅಭ್ಯಾಸಿಗಳ ಗುಣಮಟ್ಟದ ಹೆಚ್ಚಳದ ಮೇಲಿನ ಚರ್ಚೆಗಳು ಬಹಳಷ್ಟು ವಿಚಾರಗಳನ್ನು ಕೆರಳಿಸಿದವು. ಸಂದೇಹ ನಿವಾರಣೆಯ ನಂತರ ಗುರುಗಳ ಅನುಗ್ರಹ ಮತ್ತು ಉತ್ಸಾಹೀ ಅಭ್ಯಾಸಿಗಳ ಪಾಲ್ಗೊಳ್ಳುವಿಕೆಯಿಂದ ಕಾರ್ಯಕ್ರಮವು ಸಂತೃಪ್ತಿಕರವಾಗಿದ್ದಿತು.

### ನಾಸಿಕ್, ಮಹಾರಾಷ್ಟ್ರ

ಡಿಸೆಂಬರ್8, 2011ರಂದು ಸೋ. ಸುನಿಲ್ ಚಂದ್ರನ್‌ರವರ ನಿವಾಸದಲ್ಲಿ ನಡೆಸಲಾದ ಕೂಟದಲ್ಲಿ ಸೇನಾಧಿಕಾರಿಗಳು, ಅವರ ಪತ್ನಿಯರು, ಶಿಕ್ಷಕರು– ಒಟ್ಟು 12 ಜನ ಪಾಲ್ಗೊಂಡಿದ್ದರು. ನಾಸಿಕ್‌ನ ಕೇಂದ್ರ ಮುಖ್ಯಸ್ಥೆ ಸೋ. ಅನಸೂಯಾ ರಾಮಚಂದ್ರನ್‌ರವರು ಸಹಜಮಾರ್ಗದ ಮಹತ್ವ ಮತ್ತು ಅದು ಹೇಗೆ ಮನುಜರಲ್ಲಿ ಸಮತೋಲಿತ ಅಸ್ತಿತ್ವದೊಡನೆ ಆಧ್ಯಾತ್ಮಿಕ ಪ್ರಗತಿಗೆ ಸಹಕಾರಿಯಾಗುತ್ತದೆ ಎಂಬುದನ್ನು ವಿವರವಾಗಿ ಕಥಾನಕಗಳು ಮತ್ತು ಉದಾಹರಣೆಗಳೊಂದಿಗೆ ತಿಳಿಸಿದರು. ಭಾಗಿಗಳು ಆಧ್ಯಾತ್ಮಿಕತೆಯ ಎಲ್ಲಾ ಅಂಶಗಳ ಕುರಿತು ಕುತೂಹಲ ತೋರಿದ್ದರಿಂದ ವೈಯಕ್ತಿಕ ಅನುಭವಗಳ ಕುರಿತು ಸಂದೇಹಗಳು ತಲೆದೋರಿದವು. ಭಾಗಿಗಳಲ್ಲನೇಕರು ಸ್ಥಳೀಯ ಪ್ರಶಿಕ್ಷಕರ ಸಂಪರ್ಕ ವಿವರಗಳನ್ನು ಬಯಸಿದ್ದರಿಂದ ಲಭ್ಯವಾಗುವ ವ್ಯವಸ್ಥೆ ಮಾಡಲಾಯಿತು.

## ಸರಳೀಕೃತ ಕಮ್ಮಟಗಳು

### ಮುಂಬೈ



"ವಿಷಯಕ್ಕಿಂತ ವರ್ತನೆ ಮುಖ್ಯ"

2011ರ ಅಕ್ಟೋಬರ್‌ನಲ್ಲಿ ವರ್ಧಿತ ತರಬೇತು ಕಾರ್ಯಕ್ರಮವನ್ನು ಭಾರತ ಮತ್ತು ವಿದೇಶಗಳ 65 ಭಾಗಿಗಳಿಗಾಗಿ ನಡೆಸಲಾಯಿತು. ಅಭ್ಯಾಸಿಗಳಿಗಾಗಿ ನಡೆಸುವ ತರಬೇತಿಯು ಪರಿಣಾಮಕಾರಿಯಾಗಲು ಸಹಕಾರಿಯಾದ ಸರಳವಿಧಾನಗಳಿಂದ ನಡೆಸುವ ಈ ಕಮ್ಮಟಗಳಲ್ಲಿ ಅಭ್ಯಾಸಿಗಳು ಪುಟ್ಟ ಗುಂಪುಗಳಲ್ಲಿ ಭಾಗವಹಿಸುವುದರಿಂದ ಅವರಲ್ಲಿ ಆತ್ಮವಿಶ್ವಾಸ ಸೃಷ್ಟಿಸುತ್ತದೆ. ಪರಸ್ಪರ ವಿಶ್ವಾಸ ಮತ್ತು ಗೌರವ ಹುಟ್ಟುವುದರಿಂದ ಪ್ರತೀ ಭಾಗಿಯ ಮನ ತೆರೆಯಲು ಸಹಕರಿಸುತ್ತದೆ. ಚರ್ಚೆಯು ಸೂಕ್ಷ್ಮವಾಗಿದ್ದು (ಧ್ವನಿವರ್ಧಕ ಉಪಯೋಗಿಸದಿರುವುದರಿಂದ) ಆಶ್ರಮದ ವಾತಾವರಣಕ್ಕೆ ಸೂಕ್ತವಾಗಿತ್ತು.

ಈ ವಿಧಾನವನ್ನುಪಯೋಗಿಸಿ ಮುಂಬೈ ಮತ್ತು ಪುಣೆ ತಂಡದವರು 'ಸಂವಹನ ಮತ್ತು ಭ್ರಾತೃತ್ವ' ವಿಷಯದ ಮೇಲೆ ಎಲ್ಲರಿಗಾಗಿ (20 ನವೆಂಬರ್, 65ಭಾಗಿಗಳು) ಮತ್ತು ಪ್ರಶಿಕ್ಷಕರಿಗಾಗಿ (4 ಡಿಸೆಂಬರ್, 36ಭಾಗಿಗಳು) ಎರಡು ಕಮ್ಮಟಗಳನ್ನೇರ್ಪಡಿಸಿದ್ದರು.

ಬಹುತೇಕ ಚರ್ಚೆಗಳು 8–12ರ ಸಣ್ಣ ಗುಂಪುಗಳಲ್ಲಿ ಸಹೋದರತ್ವ ಭಾವದೊಡನೆ ನಡೆಯಿತು. ಆತ್ಮಪರೀಕ್ಷಣೆಯನ್ನು ಉದ್ಯುಕ್ತಗೊಳಿಸಿದ ವಿಷಯಗಳನ್ನು ಗುರುಗಳು ನೀಡಿದ ಸಾಹಿತ್ಯ ಮತ್ತು ದಿವ್ಯಲೋಕದಿಂದ ಪಿಸುಮಾತುಗಳಿಂದ ಆಯ್ದುದಾಗಿತ್ತು. ಅಭ್ಯಾಸಿಗಳಿಂದ ಧನಾತ್ಮಕ ಪ್ರತಿಸ್ಪಂದನೆ ದೊರೆಯಿತು. ಕಲಿಕೆಯು ಮುಖ್ಯವಾಗಿ ಭಾವನೆಗಳು, ಭ್ರಾತೃತ್ವ (6ನೇ ನಿಯಮ) ಮೇಲೆ ಆಧಾರಿತವಾಗಿದ್ದು ಆಲೋಚನೆ/ಜ್ಞಾನಕ್ಕೆ ಆಸ್ಪದವಿರಲಿಲ್ಲ.



# ಪರ್ಯಾಲೋಚನೆಯ ಸಮಯ



## ವಾಶಿ, ಮುಂಬೈ

ಮುಂಬೈನ ವಾಶಿ ಪ್ರದೇಶದ ಹಾಗೂ ಸುತ್ತಮುತ್ತಲಿನ ಅಭ್ಯಾಸಿಗಳು ಪ್ರತೀ ತಿಂಗಳ ಎರಡನೇ ಶನಿವಾರದಂದು ಜೊತೆಗೂಡುತ್ತಿದ್ದಾರೆ. ಅವರ ಮೊದಲ ಕೂಟವು 'ಪ್ರಾರ್ಥನೆ' ವಿಷಯದ ಮೇಲೆ ಸೋ. ರಮಣಯ್ಯನವರ ನಿವಾಸದಲ್ಲಿ ನಡೆಯಿತು. ಸಮೂಹಚರ್ಚೆಗಳಿಂದ ದೊರೆತ ಅಂಶಗಳನ್ನು ಪಟ್ಟಿ ಮಾಡಲಾಯಿತು. ಪ್ರತೀ ಅಭ್ಯಾಸಿಯೂ ಒಂದೆರಡು ನಿಮಿಷಗಳ ಕಾಲ ಮಾತನಾಡಿದರು. ಕೂಟವನ್ನು ಹತ್ತು ನಿಮಿಷಗಳ ಪ್ರಾರ್ಥನಾಧ್ಯಾನದೊಂದಿಗೆ ಮುಕ್ತಾಯಗೊಳಿಸಲಾಯಿತು.

ಇನ್ನು ಮುಂದೆಯೂ ಸಹ ಇಂತಹ ಸಭೆಗಳನ್ನು ವೈವಿಧ್ಯಮಯ ವಿಷಯಗಳೊಂದಿಗೆ ಪ್ರತ್ಯೇಕ ಅಭ್ಯಾಸಿಗಳ ನಿವಾಸಗಳಲ್ಲಿ ಆಯೋಜಿಸುವ ಯೋಜನೆಯಿದೆ. ಮೊದಲಿಗೆ ಸಹಜಮಾರ್ಗ ಸಾಧನೆಯನ್ನು ಚರ್ಚಿಸಿ ಆನಂತರ ಸಹಜಮಾರ್ಗ ತತ್ವಗಳ ಸೂಕ್ಷ್ಮ ಅಂಶಗಳನ್ನು ಕೈಗೆತ್ತಿಕೊಳ್ಳಲಾಗುವುದು.

## ಗುಲಬರ್ಗಾ, ಉ.ಕರ್ನಾಟಕ

ನವೆಂಬರ್ 7ರಂದು ಸೋ.ಮಹೇಶ್ ದೇಶಪಾಂಡೆಯವರ ನಿವಾಸದಲ್ಲಿ ಇಪ್ಪತ್ತು ಅಭ್ಯಾಸಿಗಳ ಕೂಟವೊಂದು ನಡೆಯಿತು. ಗುರುಗಳ ಉಪನ್ಯಾಸ 'ಸಾಂಕಲ್ಪಿಕ ಹಾಗೂ ವ್ಯವಸ್ಥಿತ ಸಾಧನೆ' ಯ ನಂತರ ವಿಶ್ವಪ್ರಾರ್ಥನೆ ಮಾಡಲಾಯಿತು. ನಂತರ ಕೆಲವು ಸಾಮಾನ್ಯ ಚರ್ಚೆಗಳು ಮತ್ತು ಚಹಾದೊಂದಿಗೆ ಅಭ್ಯಾಸಿಗಳು ಜೊತೆಗೂಡಿದರು. ಗುರುಗಳ ಉಪಸ್ಥಿತಿಯ ಅನುಭವದೊಂದಿಗೆ ವಾತಾವರಣವು ಸ್ನೇಹದಾಯಕ ಮತ್ತು ಆನಂದಭರಿತವಾಗಿದ್ದಿತು.



## ವಡೋದರ, ಗುಜರಾತ್

ವಡೋದರಾದ ಸುಂದರ್‌ವನ್ ಸೊಸೈಟಿಯಲ್ಲಿ ಡಿಸೆಂಬರ್17, 2011ರಂದು ಅಭ್ಯಾಸಿಗಳು ಒಟ್ಟುಗೂಡಿ 'ಸಹನೆಯೇ ಚಾರಿತ್ರ್ಯ' ವಿಷಯವನ್ನು ಚರ್ಚಿಸಿದರು. ಅವರು ಈ ಹಿಂದಿನ ವಿಷಯವಾದ 'ವರ್ತನೆ'ಯ ಪುನರಾವರ್ತನೆಯೊಂದಿಗೆ ಪ್ರಾರಂಭಿಸಿ ಕೆಲವು ನಿಮಿಷಗಳ ಕಾಲ ಮೌನಚಿಂತನೆ ನಡೆಸಿದರು. ಸಭೆಯು ಮುಂದುವರೆದಂತೆ ಅಭ್ಯಾಸಿಗಳು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತ ಪಡಿಸಿದರು.ಪ್ರತೀ ವ್ಯಕ್ತಿಗೂ ತನ್ನಲ್ಲಿ ಬದಲಾವಣೆಯಾಗಬೇಕೆಂದೆನಿಸಿತು. ಅವರು ತಮ್ಮ ಬಾಹ್ಯ ಮತ್ತು ಆಂತರಿಕ ವ್ಯಕ್ತಿತ್ವಗಳಲ್ಲಿ ಸಮತೋಲನ ತರಲು ಕಾಲಾವಕಾಶ ಬೇಕಾಗುತ್ತದೆ, ಇತರರೊಡನೆ ಸಹಾನುಭೂತಿ ತರಲು ಹೃದಯಗಳನ್ನು ತೆರೆದುಕೊಳ್ಳುವುದು ಅಗತ್ಯ ಎಂದು ಅಭಿಪ್ರಾಯ ಪಟ್ಟರು. ಇದರಿಂದ ಸನ್ನಿವೇಶಗಳನ್ನು ಧನಾತ್ಮಕವಾಗಿ ಮತ್ತು ಸಮರ್ಪಣಾಭಾವದಿಂದ ಎದುರಿಸಲು ಸಾಧ್ಯವಾಗುತ್ತದೆ. ಸಂಕ್ಷಿಪ್ತದಲ್ಲಿ, 'ಚಾರಿತ್ರ್ಯ'ವೆಂದರೆ ವರ್ನರ್ ಎರ್ಹಾರ್ಡ್ ಹೇಳುವಂತೆ, "ಎಲ್ಲಾ ಸಮಯದಲ್ಲೂ, ಎಲ್ಲಾ ಸಂದರ್ಭಗಳಲ್ಲೂ, ನಮ್ಮ ಜೀವನದ ಗುಣಮಟ್ಟ ಪರಿವರ್ತಿಸಿಕೊಳ್ಳುವ ಸಾಮರ್ಥ್ಯ ನಮಗಿದೆ."

ಆಲೋಚನೆಗಳ ಹಾಗೂ ಸೂಚನೆಗಳ ಸೂಕ್ಷ್ಮತೆಯು ಜೀವನದ ಪ್ರತೀ ಕ್ಷಣವೂ ನಮ್ಮ ಧ್ಯೇಯವಾಗಿರಬೇಕು ಎಂಬ ಭಾವನೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.. ಇದರಿಂದ ಮನ ಹಗುರಾಗಿ ನಮ್ಮೊಳಗೆ ಪ್ರಶಾಂತತೆ ಮತ್ತು ನೆಮ್ಮದಿ ನೆಲೆಸುತ್ತದೆ.

## ಚೆನ್ನೈ ಯುವ ಕೂಟ

### ನಾಟ್ರಂಪಲ್ಲಿ ಆಶ್ರಮ



ಅಕ್ಟೋಬರ್ 15 ಮತ್ತು 16ರಂದು ನಾಟ್ರಂಪಲ್ಲಿ ಆಶ್ರಮದಲ್ಲಿ 18–30 ವಯೋಮಾನದ ಅಭ್ಯಾಸಿಗಳಿಗಾಗಿ ಕೂಟವೊಂದನ್ನು ಆಯೋಜಿಸಲಾಗಿತ್ತು. 'ಆಧ್ಯಾತ್ಮಿಕ ಪಯಣ' ವಿಷಯಾಧಾರಿತ ಕೂಟದಲ್ಲಿ ಸುಮಾರು 55 ಉತ್ಸಾಹೀ ತರುಣ ತರುಣಿಯರು ಭಾಗವಹಿಸಿದ್ದು ಇದು ಚೆನ್ನೈನಿಂದ ನಾಟ್ರಂಪಲ್ಲಿಯವರೆಗೆ ಐದು ಪ್ರಶಿಕ್ಷಕರ ಸಹಯೋಗದೊಡನೆ ಬಸ್‌ಪ್ರಯಾಣದಿಂದ ಪ್ರಾರಂಭಗೊಂಡಿತು.

ನಾಟ್ರಂಪಲ್ಲಿಯಲ್ಲಿ ಕಾರ್ಯಕ್ರಮವನ್ನು ಊರಿನಲ್ಲಿ ಮುಂಜಾನೆಯ ವಾಯುವಿಹಾರದಿಂದ ಪ್ರಾರಂಭಗೊಳಿಸಲಾಯಿತು. 'ಆಧ್ಯಾತ್ಮಿಕ ಸೌಧ: ಮಿಷನ್' ಎಂಬ ವಿಷಯವನ್ನು ಕುರಿತ ಪ್ರಸ್ತುತಿಯ ನಂತರ ಗುರುಗಳ ಧ್ಯೇಯವನ್ನು ಪೂರ್ಣಗೊಳಿಸುವುದರಲ್ಲಿ ಅಭ್ಯಾಸಿಗಳ ಪಾತ್ರದ ಬಗ್ಗೆ ಚರ್ಚೆ ನಡೆಯಿತು. ಅನೇಕ ಸಮೂಹ ಚಟುವಟಿಕೆಗಳು ಮೋಜಿನೊಂದಿಗೆ ಕಲಿಕೆಯನ್ನು ತಂದವು. 'ಗುರುಗಳೊಂದಿಗೆ ಸಂಬಂಧ' ಮತ್ತು ಗುರುಗಳ ಮೇಲೆ ಪ್ರೇಮ ಬೆಳೆಯುವಂತೇನು ಮಾಡಬೇಕು ಎನ್ನುವ ಚರ್ಚೆಗಳು ಅವರ ಆಲೋಚನೆಗಳನ್ನು ಕೇಂದ್ರೀಕೃತಗೊಳಿಸಿದವು. ಸಾಮೂಹಿಕ ಆಟಗಳು, ಸಹಜಮಾರ್ಗ ಸಾಹಿತ್ಯದ ಕುರಿತು ರಸಪ್ರಶ್ನೆ ಮನ ರಂಜಿಸಿದವು. ಕಾರ್ಯಕ್ರಮದ ಕೊನೆಗೆ ಪ್ರತಿಯೊಬ್ಬರೂ ಕೈತೋಟದಲ್ಲಿ ಕೆಲಸ ನಿರ್ವಹಿಸಿದರು.

ಭಾಗಿಗಳಿಗೆ ಗುರುಗಳ ಭಾವಚಿತ್ರವೊಂದನ್ನು ನೀಡಲಾಯಿತು. ಅವರು ನಾಟ್ರಂಪಲ್ಲಿ ಆಶ್ರಮದ ಅಧ್ಯಾತ್ಮಿಕ ವಾತಾವರಣವನ್ನು ಸವಿಯುತ್ತಾ ಅಲ್ಲಿನ ಪ್ರಶಾಂತ ಪರಿಸರದಲ್ಲಿ ಪುನಃಶ್ಚೇತನಗೊಂಡರು.







## ಮಾನವ ಭಾವೈಕ್ಯತೆಯ ಮೇಲಿನ ಕಾರ್ಯಾಗಾರ

### ಗ್ವಾಲಿಯರ್, ಮಧ್ಯಪ್ರದೇಶ

ಮಾನವ ಭಾವೈಕ್ಯತೆಯ ಮೇಲೆ ವಲಯಮಟ್ಟದ ಮೂರುದಿನದ ಕಾರ್ಯಾಗಾರವೊಂದು ಗ್ವಾಲಿಯರ್ ಕೇಂದ್ರದಲ್ಲಿ ಅಕ್ಟೋಬರ್ 14ರಿಂದ 16ರ ವರೆಗೆ 54 ಮಂದಿ ಪ್ರಶಿಕ್ಷಣಾರ್ಥಿಗಳಿಗೆ ನಡೆಯಿತು. 14ರಂದು ಅಭ್ಯಾಸಿಗಳು ಒಟ್ಟುಸೇರಲಾರಂಭಿಸಿದ್ದು, ದಾಖಲಾತಿ ಮತ್ತು ವೈಯಕ್ತಿಕ ಬೈಠಕ್ ಗಳನ್ನು ಏರ್ಪಡಿಸಲಾಗಿತ್ತು. ಸಾಯಂಕಾಲದ ಸತ್ಸಂಗದ ನಂತರ ಸೋದರ ನಾರಾಯಣ್ ಸಿಂಗ್‌ರವರು ಸೇರಿದವರನ್ನು ಸ್ವಾಗತಿಸಿದರು.

ಮರುದಿನ ಸೋದರ ಹೋಶಂಗಾಬಾದ್‌ನ ಸೋ. ಕಮಲ್ ವಾಧ್ವಾ, ಸೋ. ಯೋಗೇಶ್ ಖಾಂಡೇವಾಲ್ ಮತ್ತು ಸೋ. ರಾಮ್ ಕಿಶೋರ್ ರವರು ವಿಶ್ವಭ್ರಾತೃತ್ವವನ್ನು ಪ್ರೇರಿಸಲು 'ಒಂದೇ ಜಗ, ಒಂದೇ ಮನುಕುಲ' ಎಂಬ ವಿಷಯದಲ್ಲಿ ಅಧಿವೇಶನವೊಂದನ್ನು ನಡೆಸಿಕೊಟ್ಟರು. ಭೋಪಾಲದ ಸೋದರ ಆರ್. ಕೆ. ಶ್ರೀವಾಸ್ತವ್ ಮತ್ತು ತಂಡದವರು 'ಚಾರಿತ್ರ್ಯ ನಿರ್ಮಾಣ' ಎಂಬ ವಿಷಯದಲ್ಲಿ ಅಧಿವೇಶನವೊಂದನ್ನು ನಡೆಸಿಕೊಟ್ಟರು. ಈ ಅಧಿವೇಶನಗಳು ಪರಸ್ಪರ ವಿಚಾರ ವಿನಿಮಯಾತ್ಮಕವಾಗಿದ್ದು ಭಾಗವಹಿಸಿದ್ದವರು ತಮ್ಮೊಳಗೆ ಪರಿಶೀಲಿಸಿಕೊಳ್ಳಲು ಕೂಡಾ ಅನುವುಮಾಡಿಕೊಟ್ಟವು. ಆ ಸಂಜೆಯನ್ನು ವೈಯಕ್ತಿಕ ಬೈಠಕ್‌ಗಳು ಮತ್ತು ಸತ್ಸಂಗಕ್ಕೆ ಮೀಸಲಾಗಿರಿಸಿದ್ದು 9.00 ಗಂಟೆಯ ಪ್ರಾರ್ಥನಾಸಮಯದ ನಂತರ ಸಾಂಸ್ಕೃತಿಕ ಕಾರ್ಯಕ್ರಮವಿತ್ತು.

16ರಂದು ಬೆಳಗಿನ ಸತ್ಸಂಗದ ನಂತರ ಸೋ. ಶಿರೀಶ್‌ರವರು 'ಹೃದಯವಾಣಿ-2007' ಪುಸ್ತಕದ ಕೆಲ ಪುಟಗಳನ್ನು ಓದಿದರು. ವಲಯ ಸಂಚಾಲಕರಾದ ಸೋದರ ವಿಕಲ್ಪ್ ರವರು ಅಭ್ಯಾಸಿಗಳನ್ನುದ್ದೇಶಿಸಿ ಮಾತನಾಡಿ ಅವರನ್ನು ಪ್ರೇರೇಪಿಸಿದರು. ಪ್ರಶಿಕ್ಷಣಾರ್ಥಿಗಳು ಆಶ್ರಮ ನಿರ್ಮಾಣದ ಪ್ರಾರಂಭವನ್ನು ವೀಕ್ಷಿಸಿದರು. ಕೊನೆಯ ಅಧಿವೇಶನವು 'ಗುರುಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಳ್ಳುವುದು' ಎಂಬ ವಿಷಯದ ಮೇಲಿದ್ದು ಅದನ್ನು ಗ್ವಾಲಿಯರ್ ನ ಸೋದರ ಶಿವಕುಮಾರ್ ಮತ್ತು ತಂಡದವರು ನಡೆಸಿಕೊಟ್ಟರು. ಸೋ. ಶಿವಕುಮಾರ್, ಸೋ. ಮನು ಚೋಪ್ರ ಮತ್ತು ಸೋ. ವಂದನಾ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಮಕ್ಕಳ ಕಾರ್ಯಕ್ರಮಗಳು

### ಬರೇಲಿ, ಉತ್ತರಪ್ರದೇಶ

ಬರೇಲಿ ಕೇಂದ್ರವು 10-16ವಯಸ್ಸಿನ ಮಕ್ಕಳಿಗಾಗಿ ನವೆಂಬರ್ 14-16ರ ವರೆಗೆ ಮೂರುದಿನಗಳ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಡಾ. ಜಿ. ಎಂ. ಭಟ್ನಾಗರ್ ಅಧಿವೇಶನವನ್ನು ಉದ್ಘಾಟಿಸಿ ನಮ್ಮ ಪ್ರಾಚೀನ ಗ್ರಂಥಗಳಿಂದ ಮೌಲ್ಯಗಳನ್ನು ಮರಳಿತರುವ ಬಗ್ಗೆ ಮಾತನಾಡಿದರು. ಕಾರ್ಯಕ್ರಮವು ಅಪರಾಹ್ನ 3.00-6.00 ಗಂಟೆಯ ವರೆಗಿದ್ದು ಪ್ರತಿದಿನವೂ ಮಿಷನ್ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತಿತ್ತು. ಅಲ್ಲಿ 'ಸ್ವ ಪ್ರಜ್ಞೆ ಮತ್ತು ಸ್ವ ನಿರ್ವಹಣೆ', 'ನಾವೆಲ್ಲ ಒಂದೇ', 'ಆರೋಗ್ಯ ಮತ್ತು ಸಾಮರಸ್ಯ' ಮತ್ತು 'ಸತ್ಯ ಮತ್ತು ಧೈರ್ಯ' ಎಂಬ ವಿಷಯಗಳ ಮೇಲೆ ಭಾಷಣಗಳಿದ್ದವು. ಮೂರುದಿನಗಳ ಅವಧಿಯಲ್ಲಿ ಚಿತ್ರಲೇಖನ, ವರ್ಣಚಿತ್ರ, ರಸಪ್ರಶ್ನೆ, ಹಾಡುವಿಕೆ ಮುಂತಾದ ವಿವಿಧ ಚಟುವಟಿಕೆಗಳಿದ್ದು ಅವನ್ನು ಸೋ. ಸಂಜೀವ್, ಸೋ. ಪ್ರವೀಣ್, ಸೋ. ರವೀಂದ್ರ, ಸೋ. ವಿಮಲಾ, ಸೋ. ಶಶಿ, ಮತ್ತಿತರ ಸ್ವಯಂಸೇವಕರ ಸಹಾಯದಿಂದ ಸಂಯೋಜಿಸಲಾಯಿತು. 'ರೇಲ್ವೆರಕ್ಷಣಾದಳ', 'ಆರೋಗ್ಯ ಮತ್ತು ವ್ಯಾಧಿನಿವಾರಣೋಪಾಯಗಳು', 'ಮಾರಾಟಯಂತ್ರ ಮತ್ತು ಅದರ ಬಳಕೆಗಳು', ಎಂಬ ವಿಷಯಗಳ ಮೇಲಿನ ಭಾಷಣಗಳು ಮಕ್ಕಳಿಗೆ ಮಾಹಿತಿದಾಯಕವಾಗಿದ್ದವು. ಕರ್ನಲ್ ನಿತೀಶ್‌ರವರು ಉತ್ತಮವಾಗಿ ಪರಿಷ್ಕರಿಸಿದ ದೃಶ್ಯ-ಶ್ರವ್ಯ ತುಣುಕುಗಳ ಮೂಲಕ ದೇಶಪ್ರೇಮ, ರಾಷ್ಟ್ರಗೀತೆಯ ಉದಯ, ಗೌರವ, ಧೈರ್ಯ, ನಾಯಕತ್ವ ಮತ್ತು ನೈತಿಕ ಮೌಲ್ಯಗಳ ಬಗ್ಗೆ ಪ್ರಸ್ತುತಪಡಿಸಿದುದು ಸಭಿಕರಲ್ಲಿ ಪ್ರತಿಯೊಬ್ಬನ ಹೃದಯವನ್ನೂ ಸ್ಪರ್ಶಿಸಿತ್ತು. ಒಟ್ಟಿನಲ್ಲಿ, ಮಕ್ಕಳು ಸ್ಫೂರ್ತಿಯುತರಾದರು ಮತ್ತು ಪ್ರೇರಣೆಗೊಂಡರು.

## ಕ್ರೀಡಾದಿನ

### ಪುಣೆ, ಮಹಾರಾಷ್ಟ್ರ

ನಾಂದೇಡ್ ಘಾಟ ಆಶ್ರಮದಲ್ಲಿ ಸೋ. ರಾಮ್‌ನಾಥ್‌ರವರು ನೇತೃತ್ವವನ್ನು ವಹಿಸಿಕೊಂಡು ವಿವಿಧ ಕ್ರೀಡಾಚಟುವಟಿಕೆಗಳನ್ನೊಳಗೊಂಡ ವಿಸ್ಮಯಕರ ವಾರಾಂತ್ಯವೊಂದನ್ನು ಅಕ್ಟೋಬರ್ 8 ಮತ್ತು 9ರಂದು ಏರ್ಪಡಿಸಿದರು. ಮೊದಲನೆ ದಿನ 18 -30 ವಯಸ್ಸಿನ ಯುವಕರಿಗೆ ಮತ್ತು ಎರಡನೆ ದಿನ ಮಕ್ಕಳು ಮತ್ತು 30ವರ್ಷಗಳ ಮೇಲ್ಪಟ್ಟವರಿಗಾಗಿತ್ತು.

ಭಿತ್ತಿಪತ್ರಗಳು, ಗುರುಗಳು ವಿವಿಧ ಕ್ರೀಡೆಗಳನ್ನಾಡುವ ಛಾಯಾಚಿತ್ರಗಳು, ಉಲ್ಲೇಖಗಳು ಮತ್ತು ಬಲೂನುಗಳು ಎಲ್ಲವೂ ಸಿದ್ಧವಾಗಿದ್ದವು. ಶನಿವಾರ ತುಂಬ ಉತ್ಸಾಹ ಮತ್ತು ಹುಮ್ಮಸ್ಸುಗಳೊಡಗೂಡಿದ ಕ್ರಿಕೆಟ್ ಆಟದೊಂದಿಗೆ ಆರಂಭವಾಯಿತು. ಈ ಪಂದ್ಯವು ಆರಂಭಿಕ ಸಂಕೋಚಗಳನ್ನೆಲ್ಲ ನಿವಾರಿಸಿತು. ತದನಂತರ ನಿಂಬೆಹಣ್ಣಿನ ಓಟ, ಪುಸ್ತಕ ಸಮದೂಗಿಸುತ್ತ ಓಟ, ಕೇರಮ್ ಮತ್ತು ಚದುರಂಗದಂಥ ಇತರ ಆಟಗಳು ನಡೆದವು. ಸ್ವಯಂಸೇವಕರು ತಯಾರಿಸಿದ ಊಟೋಪಹಾರಗಳು ಎಲ್ಲರನ್ನೂ ವಿರಮಿಸುವಂತೆ ಮಾಡಿದವು.

ರವಿವಾರ ಸತ್ಸಂಗದ ಬಳಿಕ ಅವೇ ಆಟಗಳನ್ನು 30ವರ್ಷಗಳ ಮೇಲಿನ ಅಭ್ಯಾಸಿಗಳು ಆಡಿದರು. ಈ ಚಟುವಟಿಕೆಗಳು ಅಭ್ಯಾಸಿಗಳಲ್ಲಿ ಕ್ರೀಡಾಸ್ಫೂರ್ತಿಯನ್ನು ಬಲಗೊಳಿಸಿ ಎಲ್ಲರನ್ನೂ ಸಾಮರಸ್ಯ ಮತ್ತುಸೋದರತೆಯಲ್ಲಿ ಒಗ್ಗೂಡಿಸಿದುವು.



### ತಿರುಪ್ಪೂರ, ತಮಿಳುನಾಡು

ತಿರುಪ್ಪೂರದ ಚೆಟ್ಟಿಪಾಳ್ಯಂ ಯೋಗಾಶ್ರಮದಲ್ಲಿ ನವೆಂಬರ್ 14ರಂದು ಮಕ್ಕಳದಿನವನ್ನು ಅದ್ದೂರಿಯಾಗಿ ಆಚರಿಸಲಾಯಿತು.ನೆರೆಹೊರೆಯ ಸ್ಥಳಗಳ ಸಾಧ್ಯವಾದಷ್ಟು ಮಕ್ಕಳು ಭಾಗವಹಿಸುವಂತಾಗಲು ಈ ಸಮಾರಂಭದ ಆಮಂತ್ರಣ ಪತ್ರಿಕೆಗಳನ್ನು ಮುಂಚಿತವಾಗಿ ಹಂಚಲಾಗಿತ್ತು.

ಕಾರ್ಯಕ್ರಮವು ಸಂಜೆ 5.00ಗಂಟೆಗೆ, ಮಕ್ಕಳ ವಯೋಗುಂಪಿಗೆ ಅನುಗುಣವಾಗಿ ಏರ್ಪಡಿಸಿದ ಆಟಗಳು ಮತ್ತು ಎಲ್ಲರ ಉತ್ಸಾಹದ ಪಾಲ್ಗೊಳ್ಳುವಿಕೆಯೊಂದಿಗೆ ಪ್ರಾರಂಭವಾಯಿತು. ಸಹಜಮಾರ್ಗದ ಮೇಲೆ ವಿಶೇಷ ರಸಪ್ರಶ್ನೆ ಕಾರ್ಯಕ್ರಮವೊಂದನ್ನು ಸೋ. ಸುಂದರೇಶನ್ ನಡೆಸಿಕೊಟ್ಟರು. ಈ ರಸಪ್ರಶ್ನೆಯಲ್ಲಿ ಪ್ರೇಮ, ಶಿಸ್ತು ಮತ್ತು ನೈತಿಕತೆಯಂಥ ವಿಷಯದ ಪ್ರಶ್ನೆಗಳಿದ್ದವು. ವಲಯ ಸಂಚಾಲಕರಾದ ಸೋ. ವಿಶ್ವನಾಥ ರಾವ್, ಆಶ್ರಮ ನಿರ್ವಾಹಕರಾದ ಸೋ.ಸುಬ್ಬರತ್ನಂ, ಸೋ.ಮಾರಪ್ಪನ್ ಮತ್ತು ಸೋ. ಸರಳಾರವರು ಮಕ್ಕಳೆಲ್ಲರಿಗೆ ಉಡುಗೊರೆಗಳನ್ನು ಹಂಚಿದರು. ಎಲ್ಲರಿಗೂ ರಾತ್ರಿಯೂಟವಿತ್ತು. ತಮ್ಮ ಮಕ್ಕಳೊಂದಿಗೆ ಬಂದಿದ್ದ ಹೆತ್ತವರೆಲ್ಲ ಮಿಷನ್ನಿನ ಚಟುವಟಿಕೆಗಳನ್ನು ಮೆಚ್ಚಿಕೊಂಡರು. ಸಾಕಷ್ಟುಮಂದಿ ಸಾಧನೆಯನ್ನು ಪ್ರಾರಂಭಿಸುವ ಆಸಕ್ತಿಯನ್ನೂ ವ್ಯಕ್ತಪಡಿಸಿದರು. ಆಧ್ಯಾತ್ಮಿಕ ವಾತಾವರಣದಲ್ಲಿ ಇಂಥದೊಂದು ಕಾರ್ಯಕ್ರಮವನ್ನು ನಡೆಸಿರುವ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಂಡ ಅನೇಕರು ಭವಿಷ್ಯತ್ತಿನಲ್ಲಿ ಇಂಥ ಕಾರ್ಯಕ್ರಮಗಳನ್ನು ಆಗಾಗ ನಡೆಸಬೇಕೆಂದರು.

# ಪೂರ್ಣದಿನದ ಕಾರ್ಯಕ್ರಮಗಳು


ಕಡಪ


ಮಂಗಳೂರು

## ಕಡಪ, ಆಂಧ್ರಪ್ರದೇಶ

ಆಂಧ್ರಪ್ರದೇಶದ ಕಡಪ ಕೇಂದ್ರದಲ್ಲಿ 2011ರ ಡಿಸೆಂಬರ್ 4ರಂದು ಪೂರ್ಣದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸುಮಾರು 31 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. 'ಕಾನ್‌ಸ್ಟಂಟ್ ರಿಮೆಂಬ್ರನ್ಸ್'ನ ಇತ್ತೀಚಿಗಿನ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಚಾರಿತ್ರ್ಯ ನಿರ್ಮಾಣ' ಮತ್ತು 'ನಿಜವಾದ ಸಾಧನೆ' ಎಂಬ ಎರಡು ವಿಷಯಗಳನ್ನು ಎತ್ತಿಕೊಳ್ಳಲಾಗಿತ್ತು. ಚರ್ಚೆಗಳು ಪ್ರಾದೇಶಿಕ ಭಾಷೆಯಾದ ತೆಲುಗಿನಲ್ಲಿ ನಡೆದಕಾರಣ ಇಂಗ್ಲಿಷ್ ತಿಳಿಯದವರು ಕೂಡಾ ತುಂಬ ಲಾಭ ಪಡೆಯುತ್ತಾರೆಂದು ಅಭ್ಯಾಸಿಗಳಿಗೆ ಈ ಕಾರ್ಯಕ್ರಮದ ಮೂಲಕ ತಿಳಿಯಿತು.

ಸಹಜಮಾರ್ಗದ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬರೊಂದಿಗೆ ಹಂಚಿಕೊಳ್ಳುವುದರ ಮೂಲಕ ಎಲ್ಲ ಸೋದರ, ಸೋದರಿಯರಿಗೆ ಜೀವನದ ಗುರಿಯನ್ನು ತಲುಪಲು ಅವಕಾಶವೊಂದನ್ನು ಕಲ್ಪಿಸಿಕೊಡುವ ಪರಿಕಲ್ಪನೆಯನ್ನು ಹೊಂದಿದ್ದ ನಾಟಕವೊಂದನ್ನು ಮಕ್ಕಳು ಅಭಿನಯಿಸುವುದರೊಂದಿಗೆ ದಿನದ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಮಂಗಳೂರು, ದಕ್ಷಿಣ ಕರ್ನಾಟಕ

ಮಂಗಳೂರು ಕೇಂದ್ರದಲ್ಲಿ 2011ರ ಡಿಸೆಂಬರ್ 4ರಂದು 'ನನ್ನ ಗುರುದೇವ' ಎಂಬ ವಿಷಯದ ಮೇಲೆ ಪೂರ್ಣದಿನದ ಕಾರ್ಯಕ್ರಮ ನಡೆಯಿತು. ಅಭ್ಯಾಸಿಗಳನ್ನು ಸಿದ್ಧರಿರಲು ಒಂದೆರಡು ವಾರಗಳ ಮೊದಲೇ ಹೇಳಲಾಗಿತ್ತು. ಸತ್ಸಂಗದ ನಂತರ ಗುರುಗಳ ಭಾಷಣದ ಧ್ವನಿಮುದ್ರಿಕೆಯೊಂದನ್ನು ಕೇಳಿಸಲಾಯಿತು. ಸಿದ್ಧರಾಗಿ ಬಂದಿದ್ದ ಅಭ್ಯಾಸಿಗಳು 'ನನ್ನ ಗುರುದೇವ' ಪುಸ್ತಕಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಮೇಲೆ ಮಾತನಾಡಿದರು. ಅಪರಾಹ್ನ, ಮಣಪಾಕ್ಕಂನಲ್ಲಿ ನಡೆದ ಐರೋಪ್ಯ ಸೆಮಿನಾರ್‌ನ ಡಿ.ವಿ.ಡಿ.ಯನ್ನು ಪ್ರದರ್ಶಿಸಲಾಯಿತು. ತದನಂತರ ಮುಂಬಯಿ ಕೇಂದ್ರದ ಇಬ್ಬರು ಯುವ ಅಭ್ಯಾಸಿಗಳು 'ಸತ್ಸಂಗದ ಪ್ರಾಮುಖ್ಯತೆ'ಯ ಮೇಲೆ ತರಬೇತಿ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟರು.

ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಅಭ್ಯಾಸಿಗಳನ್ನು ಇಬ್ಬಿಬ್ಬರಂತೆ ಗುಂಪುಗಳನ್ನಾಗಿ ಮಾಡಿ, ಸತ್ಸಂಗಕ್ಕೆ ತಪ್ಪದೆ ಬರಲು ಸಾಧ್ಯವಾಗದಿರುವುದಕ್ಕೆ ಕಾರಣಗಳನ್ನು ಅವಲೋಕಿಸಲು ಹೇಳಲಾಯಿತು. ಅನಂತರ ಇದನ್ನು ಎಲ್ಲರೊಂದಿಗೆ ಹಂಚಿಕೊಳ್ಳಲಾಯಿತು. ನಂತರ ಸತ್ಸಂಗದ ಪ್ರಾಮುಖ್ಯತೆಯ ಬಗ್ಗೆ ಗುರುಗಳ ಉಲ್ಲೇಖಗಳನ್ನು ಪ್ರಸ್ತುತಪಡಿಸಲಾಯಿತು. ಅದನ್ನನುಸರಿಸಿ ಅಂತರಾವಲೋಕನ ಮತ್ತು ಚರ್ಚೆಗಳಿದ್ದವು.

## ವಿರುಧುನಗರ್, ತಮಿಳುನಾಡು

ಅಕ್ಟೋಬರ್ 16ರಂದು ಸ್ಥಳೀಯ ಮತ್ತು ನೆರೆಹೊರೆಯ ಕೇಂದ್ರಗಳ ಸುಮಾರು 40ಮಂದಿ ಅಭ್ಯಾಸಿ ಸೋದರ ಸೋದರಿಯರು ಚಿನ್ನವಲ್ಲಿಕುಲಂನ ವಿರುಧುನಗರ ಆಶ್ರಮದಲ್ಲಿ ಸಂಘಟಿಸಲಾದ ಪೂರ್ಣದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲೆಂದು ಸೇರಿದರು. ಬೆಳಗಿನ 7.30ರ ಸತ್ಸಂಗ ಮತ್ತು ಉಪಾಹಾರದ ನಂತರ ಅಭ್ಯಾಸಿಗಳು ಕಾರ್ಯಕ್ರಮವನ್ನು ಆರಂಭಿಸಲು ಉತ್ಸುಕರಾಗಿದ್ದರು. ಹಿಂದಿನ ತಿಂಗಳು ಪೂರ್ಣದಿನ ಕಾರ್ಯಕ್ರಮದಂದು ನಡೆದಿದ್ದ ಚರ್ಚೆಯ ಮುಂದುವರಿಕೆಯಾಗಿ, ಅಭ್ಯಾಸಿಗಳು ಗುಂಪುಗಳಾಗಿ ವಿಂಗಡಿಸಲ್ಪಟ್ಟು 'ಇನ್ನಷ್ಟು ಉತ್ತಮ ಅಭ್ಯಾಸಿಯಾಗಿ ನಿಮ್ಮನ್ನು ಬದಲಾಯಿಸಿಕೊಳ್ಳಿ' ಎಂಬ ವಿಷಯದ ಮೇಲೆ ಚರ್ಚೆ ನಡೆಸಿದರು. ಗುಂಪು ಚರ್ಚೆಯ ಕೊನೆಯಲ್ಲಿ ಗುಂಪುಗಳ ನಾಯಕರುಗಳು ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸಿದರು.

ಚರ್ಚಾಕಾಲದಲ್ಲಿ ಅನೇಕ ಅಂಶಗಳು ವಿಕಸಿತಗೊಂಡವು. ಈ ಕಾರ್ಯಕ್ರಮದಲ್ಲಿ ತಾವು ಗುರುಗಳ ಸಾನ್ನಿಧ್ಯ ಮತ್ತು ಮಾರ್ಗದರ್ಶನದ ಸಂವೇದನೆಯನ್ನು ಹೊಂದಿದೆವೆಂದು ಅನೇಕ ಅಭ್ಯಾಸಿಗಳು ತಿಳಿಯಪಡಿಸಿದರು. ಪೂರ್ಣದಿನದ ಕಾರ್ಯಕ್ರಮವು ಸಾಯಂಕಾಲದ ಸತ್ಸಂಗದೊಂದಿಗೆ ಕೊನೆಗೊಂಡಿತು.



ವಿರುಧುನಗರ್


ಬಳ್ಳಾರಿ

## ಹುಬ್ಬಳ್ಳಿ, ಉತ್ತರ ಕರ್ನಾಟಕ

ನವೆಂಬರ್ 13ರಂದು ತರುಣರು ತಮ್ಮ ಪರಿಕಲ್ಪನೆಯ ಕಾರ್ಯಕ್ರಮವೊಂದನ್ನು ಅಭ್ಯಾಸಮಾಡಿ ಪ್ರದರ್ಶಿಸಿದರು. ಸತ್ಸಂಗ ಮತ್ತು ಉಪಾಹಾರದ ನಂತರ ಅಭ್ಯಾಸಿಗಳು ಮತ್ತು ಅನ್ವೇಷಕರ ನಡುವಿನ ಅಣಕು ಚರ್ಚಾಕೂಟವೊಂದು ನಡೆಯಿತು. ಎರಡು ಗಂಟೆಗಳ ಕಾಲ ನಡೆದ ಚರ್ಚಾಕೂಟವು ವಿನೋದಕರವೂ, ಮನೋರಂಜಕವೂ, ಬೋಧನಾತ್ಮಕವೂ ಆಗಿತ್ತು.

ನಮ್ಮ ಸಾಧನಾಪದ್ಧತಿಗೆ ಸಂಬಂಧಿಸಿರದ ಫಲಕಗಳನ್ನು ತೋರಿಸಲಾಯಿತು ಮತ್ತು ಗುಂಪುಗಳನ್ನು ಮಾಡಿ ಫಲಕಗಳಿಗೆ ಘೋಷವಾಕ್ಯವನ್ನು ಸಹಜಮಾರ್ಗದಿಂದ ಆರಿಸಿಕೊಡುವಂತೆ ಹೇಳಲಾಯಿತು. ಭೋಜನಾನಂತರ ಯುವಕರು ಅಭಿನಯಿಸಿದ ಕಿರುನಾಟಕವು ವಿವಿಧ ಧರ್ಮಗಳ ಸಂಸ್ಥಾಪಕರುಗಳೆಲ್ಲ ಒಂದೇ ವಿಷಯಗಳನ್ನು ಹೇಳಿದ್ದಾರೆ ಎಂಬ ವಿಷಯವನ್ನು ಬೆಳಕಿಗೆ ತಂದಿತು. ಇದು ದೃಶ್ಯ ಮತ್ತು ಹಿನ್ನೆಲೆಸಂಗೀತವನ್ನು ಒಳಗೊಂಡಿದ್ದು ಪ್ರತಿಯೊಬ್ಬರೂ ಕಾರ್ಯಕ್ರಮವನ್ನು ಆನಂದಿಸಿದರು.

## ಬಳ್ಳಾರಿ, ಉತ್ತರ ಕರ್ನಾಟಕ

ನವೆಂಬರ್ 6ರಂದು ಬೆಳಗಿನ ಸತ್ಸಂಗದ ನಂತರ ಅಭ್ಯಾಸಿಗಳು ಮತ್ತು ಮಕ್ಕಳು ಸೃಷ್ಟಿ ಗಾರ್ಡನ್ಸ್‌ನತ್ತ ನಡೆದರು. ಬಳ್ಳಾರಿಯ ಮೂವರು ಅಭ್ಯಾಸಿಗಳು ಖರಗಪುರದಲ್ಲಿ ಕ್ರೆಸ್ಟ್‌ನ 'ಚಾರಿತ್ರ್ಯ ನಿರ್ಮಾಣ'ತರಬೇತಿ ಕಾರ್ಯಕ್ರಮ(ತೆಲುಗು)ದಲ್ಲಿ ಭಾಗವಹಿಸಿದ್ದು ಅವರು ಆ ಕಾರ್ಯಕ್ರಮದ ಬಗ್ಗೆ ಮತ್ತು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಪ್ರಾಮುಖ್ಯತೆಯ ಬಗ್ಗೆ ವಿವರಿಸಿದರು. ತದನಂತರ ಎಲ್ಲ ಅಭ್ಯಾಸಿಗಳು ಆಶುಭಾಷಣ ಚಟುವಟಿಕೆಯಲ್ಲಿ ಭಾಗವಹಿಸಿದರು. ಊಟದ ನಂತರ ರಸಪ್ರಶ್ನೆ ಕಾರ್ಯಕ್ರಮವಿದ್ದು, ಅದನ್ನು ಮಕ್ಕಳು ನಿರ್ವಹಿಸಿದರು. ಆನಂತರ ಮಕ್ಕಳೇ ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. 4.00 ಗಂಟೆಗೆ ಸಾಯಂಕಾಲದ ಸತ್ಸಂಗದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



## ಲಯಯೋಗ ಆಶ್ರಮದಲ್ಲಿ ಉದ್ಘಾಟನಾ ಸಮಾರಂಭ
## ಸಾರನಾಥ, ವಾರಣಾಸಿ

ಗುರುಗಳು 2011 ರ ಡಿಸೆಂಬರ್ 4 ರಂದು ಚೆನ್ನೈ ಮತ್ತು ವಾರಣಾಸಿಯ ನಡುವೆ ನೇರಪ್ರಸಾರ ವೀಡಿಯೋ ಸಂಪರ್ಕದ ಮೂಲಕ ವಾರಣಾಸಿಯ ಸಾರನಾಥದಲ್ಲಿನ ಲಯಯೋಗ ಆಶ್ರಮದ ಧ್ಯಾನ ಮಂದಿರವನ್ನು ಉದ್ಘಾಟಿಸಿದರು. ಸೋ. ಉಮಾಶಂಕರ್ ಬಾಜಪೇಯಿ, ಕಾರ್ಯದರ್ಶಿ, ಜಸ್ಟಿಸ್ ಆರ್.ಆರ್.ಕೆ. ಚತುರ್ವೇದಿ, ಸೋ. ಆಶಿಶ್ ಸಿಂಗ್, ಸೋ. ಎ.ಕೆ. ಗಾರ್ಗ ಮತ್ತು ಸೋ. ವೈ.ಎನ್. ಪ್ರಸಾದ್ ಉಪಸ್ಥಿತರಿದ್ದರು.

ಪೂರ್ವಾಹ್ನ 6.30 ಗಂಟೆಗೆ ಅಭ್ಯಾಸಿಗಳೆಲ್ಲ(ಹೆಚ್ಚುಕಡಿಮೆ 1000) ಧ್ಯಾನಮಂದಿರದಲ್ಲಿ ಸೇರಿದ್ದರು. ಗುರುಗಳು ಪರದೆಯ ಮೇಲೆ ಪ್ರತ್ಯಕ್ಷರಾದಂತೆ ಮಂದಿರವಿಡೀ ಗಟ್ಟಿಯಾದ ಕರತಾಡನದ ಶಬ್ದದಿಂದ ತುಂಬಿಹೋಯಿತು. ಗುರುಗಳನ್ನು ನೋಡಿ ಪ್ರತಿಯೊಬ್ಬರೂ ಆನಂದಪರವಶರಾದರು. ಗುರುಗಳು ಸೋ. ಬಾಜಪೇಯಿಯವರಿಗೆ ಫಲಕವನ್ನು ಅನಾವರಣಗೊಳಿಸಲು ಆದೇಶಿಸಿದರು ಮತ್ತು ನಂತರ ಧ್ಯಾನಮಂದಿರವನ್ನು ಬಾಬೂಜಿ ಮಹಾರಾಜ್‌ರವರಿಗೆ ಸಮರ್ಪಿಸಿದರು ಮತ್ತು ಧ್ಯಾನಮಂದಿರವನ್ನು ಧ್ಯಾನಕ್ಕೆ ಉಪಯೋಗಿಸಲು ಅಭ್ಯಾಸಿಗಳಿಗೆ ಅನುಮತಿಯನ್ನಿತ್ತರು. ಅವರು, "ಸಹಜಮಾರ್ಗವೆಂದರೆ ಪ್ರೇಮಮಾರ್ಗ. ನಾವು ಈ ಸ್ಥಳವನ್ನು ನಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಬಳಸಬೇಕು. ಸಹಜಮಾರ್ಗದಲ್ಲಿ ದ್ವೇಷಕ್ಕೆ ಜಾಗವಿಲ್ಲ" ಎಂದರು. ವೀಡಿಯೋ ಸಂಪರ್ಕದ ಈ ವಿಧಾನದ ಕುರಿತು ಹೇಳುತ್ತ ಅವರು ಈ ವೈಜ್ಞಾನಿಕಯುಗದಲ್ಲಿ ನಾವು ಪ್ರತ್ಯೇಕವಾಗಿಲ್ಲ, ನಾವೆಲ್ಲ ಒಂದಾಗಿದ್ದೇವೆ ಎಂದರು.

ವಾರಣಾಸಿಯ ಕೇಂದ್ರ ಸಂಚಾಲಕ ಡಾ. ಪ್ರಸನ್ನಕುಮಾರ್ ಎಲ್ಲರನ್ನೂ ಸ್ವಾಗತಿಸಿ, ಗುರುಗಳ ಆಶೀರ್ವಚನಗಳಿಗಾಗಿ ಕೃತಜ್ಞತೆಯನ್ನು ಸಮರ್ಪಿಸಿದರು. ಸೋ. ಬಾಜಪೇಯಿಯವರು ಪ್ರೇಮದ ಪ್ರಾಮುಖ್ಯತೆಯನ್ನು ವಿಶದಪಡಿಸಿದರು. ಸೋ. ಎಸ್. ಪಿ. ಸಿನ್ಹಾ ಲಯಯೋಗ ಆಶ್ರಮದ ಇತಿಹಾಸವನ್ನು ಪ್ರಸ್ತುತಪಡಿಸಿದರು. ಎರಡನೆಯ ಅಧಿವೇಶನದಲ್ಲಿ ಬೇರೆ ಕೇಂದ್ರಗಳ ಅಭ್ಯಾಸಿಗಳು ಮಾತನಾಡಿದರು. ತದನಂತರ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಾಯಂಕಾಲದ ಸತ್ಸಂಗ ನಡೆಯಿತು.

# ಪ್ರಕಟಣೆಗಳು

### ಚೆನ್ನೈಗೆ ಹೊಸ ಕೇಂದ್ರಸಂಚಾಲಕರು

ಚೆನ್ನೈ ಈಗ ಹೊಸ ವಲಯ(2ಅ)ವಾಗಿದ್ದು ಸೋ. ಕ್ಯಾಪ್ಟನ್ ವಿನೀತ್ ಸಿಂಗ್ ರಾಣಾವತ್‌ರವರು ಕೇಂದ್ರಸಂಚಾಲಕರಾಗಿರುವರು.

### ಇಕೋಸ್ ವಾರ್ತಾಪತ್ರಕ್ಕೆ ಅನುವಾದಕರು

ಇಕೋಸ್ ಇಂಡಿಯಾ ವಾರ್ತಾಪತ್ರ ಪ್ರಕಟವಾಗುತ್ತಿರುವ ಯಾವುದೇ ಪ್ರಾದೇಶಿಕ ಭಾಷೆಗೆ ಇಂಗ್ಲಿಷ್‌ನಿಂದ ಭಾಷಾಂತರಮಾಡುವ ಇಚ್ಛೆ ನಿಮಗಿದ್ದಲ್ಲಿ ದಯವಿಟ್ಟು ಒಂದು ಇ-ಮೇಲ್ ಅನ್ನು in.newsletter@srcm.org ಗೆ ಕಳುಹಿಸಿ.

### ಚಂದಾದಾರಿಕೆಗೆ ಈಮೇಲ್ ಐಡಿ


ನಾವು ನಮ್ಮ ವಾರ್ತಾಪತ್ರಗಳನ್ನು ಕಳುಹಿಸುವಾಗ ಯಾಹೂ ಮತ್ತು ರೀಡಿಫ್‌ಮೇಲ್ ಸರ್ವರ್‌ಗಳಲ್ಲಿ ನಮಗೆ ಸಮಸ್ಯೆಯಿರುವುದನ್ನು ದಯವಿಟ್ಟು ಗಮನಿಸಿ. ನೀವು ವಾರ್ತಾಪತ್ರಕ್ಕೆ ಯಾಹೂ ಅಥವಾ ರೀಡಿಫ್ ಮೇಲ್ ವಿಳಾಸದಲ್ಲಿ ಚಂದಾದಾರರಾಗಿದ್ದರೆ ದಯವಿಟ್ಟು ಅದನ್ನು ಬಿಟ್ಟು ಯಾವುದಾದರೂ ಬೇರೆ ಇಮೇಲ್ ವಿಳಾಸದಲ್ಲಿ ಮತ್ತೆ ಚಂದಾದಾರರಾಗಿ. ಈ ಅನಾನುಕೂಲಕ್ಕಾಗಿ ವಿಷಾದಿಸುತ್ತೇವೆ.

### ಮಣಪಾಕ್ಕಂಗೆ ಪ್ರಯಾಣ


ರಷ್ಯಾ ಮತ್ತು ಹಿಂದಿನ CIS ದೇಶಗಳಲ್ಲಿನ ಅಭ್ಯಾಸಿಗಳಿಗಾಗಿ ವಿಚಾರ ಸಂಕಿರಣವೊಂದು 2012ರ ಜನವರಿ 17ರಿಂದ 24ರ ನಡುವೆ ಮಣಪಾಕ್ಕಂನ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ನಡೆಯಲಿದೆ. ಈ ಕಾರಣದಿಂದಾಗಿ ಆ ದಿನಗಳಲ್ಲಿ ಬೇರೆ ಕೇಂದ್ರಗಳ ಅಭ್ಯಾಸಿಗಳು ಮಣಪಾಕ್ಕಂಗೆ ಭೇಟಿಯ ಯಾವುದೇ ಯೋಜನೆಯನ್ನು ಹಾಕಿಕೊಳ್ಳಬಾರದಾಗಿ ವಿನಂತಿ.

# ಹೊಸ ಬಿಡುಗಡೆಗಳು


ಪೂಜ್ಯ ಗುರುಗಳು ಹೊಸವರ್ಷದ ದಿನ ಮಣಪಾಕ್ಕಂನಲ್ಲಿ ಈ ಕೆಳಗಿನವುಗಳನ್ನು ಬಿಡುಗಡೆಮಾಡಿದರು.





ಮಣಪಾಕ್ಕಂನಲ್ಲಿ 2010ರ ಡಿಸೆಂಬರ್‌ನಲ್ಲಿ ನಡೆದ ಐರೋಪ್ಯ ವಿಚಾರಸಂಕಿರಣವನ್ನು 'ಹೆವನ್'(ಡಿವಿಡಿ)ಎಂಬ ಶಿರೋನಾಮೆಯಲ್ಲಿ ಸೆಲ್ಯುಲಾಯ್ಡ್ ಮೇಲೆ ಸುಂದರವಾಗಿ ಸೆರೆಹಿಡಿಯಲಾಗಿದ್ದು ಸ್ಪಿರಿಚುವಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್‌ನ ವಿಶೇಷ ತಯಾರಿಕೆಯಾಗಿ ಹೊಸ ಬಿಡುಗಡೆಯಾಗಿದೆ.





ಸಹಜಮಾರ್ಗದ ಸಿದ್ಧಾಂತಗಳು-12 (ತಮಿಳು)




ಸಹಜಮಾರ್ಗದ ಸಿದ್ಧಾಂತಗಳು-14 (ತೆಲುಗು)




ಹೃದಯವಾಣಿ ಸಂ.-2 (ಇಂಗ್ಲಿಷ್)




ವೃಕ್ಷದಫಲ (ಮರಾಠಿ)

# ಪುಣೆ ಆಶ್ರಮ

## ಬೆಳಕಿನ ಕೇಂದ್ರ

**"ಸಂತೋಷ– ಖಂಡಿತ, ನಾವು ಸಂತೋಷಯುತರಾಗಿರಬೇಕು, ಆದರೆ ಗುರುಗಳು ಅನೇಕ ಸಂದೇಶಗಳಲ್ಲಿ ಅಭ್ಯಾಸಿಯು ಸದಾ ಉಲ್ಲಸಿತನಾಗಿರಬೇಕು, ಬರೇ ಸಾಂದರ್ಭಿಕವಾಗಿ ಅಲ್ಲ, ನಿಮ್ಮೆದುರು ಪನ್‌ಶೆತ್ ಸರೋವರ ಇದೆ ಮತ್ತು ನೀವು ಅಸ್ತಮಿಸುವ ಪ್ರಕಾಶಯುತ ಸೂರ್ಯನನ್ನು ನೋಡುತ್ತಿದ್ದೀರಿ ಎಂಬ ಕಾರಣದಿಂದ ನೀವು ಸಂತೋಷಪಡುವ ಕಿರು ರಂಜನೆಯ ಅವಧಿಯಲ್ಲಿ ಮಾತ್ರವಲ್ಲ. ನಾವು ನಮ್ಮ ಹೃದಯಗಳಲ್ಲಿರುವ ಆಂತರಿಕ ಪ್ರಕೃತಿಯನ್ನು ಪ್ರೀತಿಸಲೇಬೇಕು ಎಂಬ ನೈಜ ಅರ್ಥದಲ್ಲಿ ನಾವು ಪ್ರಕೃತಿಪ್ರೇಮಿಗಳು, ಹೊರಗಿನ ಪ್ರಕೃತಿ ಅದರ ಪ್ರತಿಬಿಂಬ ಮಾತ್ರ, ಅಥವಾ ಅದು ಒಳಗಿದ್ದರೆ ಮಾತ್ರ ಪ್ರತಿಬಿಂಬ ಇರಬಲ್ಲುದು."**

ಸಹಜಮಾರ್ಗ ಕುಟುಂಬವು ಪುಣೆ ಮತ್ತು ಸುತ್ತಮುತ್ತ ಬೆಳೆಯತೊಡಗಿದಾಗ ಆಶ್ರಮದ ಅಗತ್ಯವು ಅನುಭವಕ್ಕೆ ಬಂತು. 2001 ಆಶ್ರಮ ನಿರ್ಮಾಣದ ಪ್ರಸ್ತಾಪವನ್ನು ಗುರುಗಳೆದುರು ಮಂಡಿಸಿದಾಗ ಅವರು ಅದನ್ನು ವಿಳಂಬವಿಲ್ಲದೆ ಒಪ್ಪಿಕೊಂಡರು.

2001ರ ಜನವರಿಯಲ್ಲಿ ಸ್ಥಳ ನೋಂದಣಿಯು ಜರುಗಿತು ಮತ್ತು ಆಶ್ರಮ ಸೌಲಭ್ಯಗಳ ನಿರ್ಮಾಣವು 2004 ರ ಆರಂಭದಲ್ಲಿ ಸಂಪೂರ್ಣವಾಯಿತು (2004ರ ಜುಲೈನಲ್ಲಿ ಸಂಪೂರ್ಣಗೊಂಡ ಮಕ್ಕಳ ಕೇಂದ್ರ ಕುಟೀರದ ಹೊರತು). ಆಶ್ರಮವು ಸಿಂಹಗಢ ರಸ್ತೆಯ ಸಮೀಪ ಪ್ರಶಾಂತವಾದ ಜಾಗದಲ್ಲಿ 3919ಚ.ಮೀ. ಅಳತೆಯ ನಿವೇಶನದಲ್ಲಿದೆ.

ಆಶ್ರಮವು ಅದರ ಪರಿಸರವನ್ನು ತಣ್ಣಗೆ, ಮೌನ ಮತ್ತು ಪ್ರಶಾಂತವಾಗಿಡುವ ಜಲಾಕರವೊಂದರ ಸಮೀಪವಿದೆ. ಪುಣೆ ರೈಲ್ವೆ ಸ್ಟೇಷನ್‌ನಿಂದ ಸುಮಾರು 15ಕಿ.ಮೀ. ದೂರದಲ್ಲಿದ್ದು ರಸ್ತೆ ಮತ್ತು ಸಾರ್ವಜನಿಕ ಸಾರಿಗೆ ಸೌಲಭ್ಯವಿದೆ.

ನಾಂದೇಡ್ ಆಶ್ರಮವು ಪಾನ್‌ಶೆಟ್ ಪುನಶ್ಚೇತನ ಕೇಂದ್ರದಿಂದ ಬರೇ 10ಕಿ.ಮೀ. ದೂರದಲ್ಲಿದೆಯೆಂಬ ಅಂಶವು ಸ್ವಯಂಸೇವಕರು ಮತ್ತು ಅಭ್ಯಾಸಿಗಳು ಅವೆರಡರ ನಡುವೆ ಸುಲಭವಾಗಿ ಓಡಾಡುವುದನ್ನು ಅನುಕೂಲಕರವನ್ನಾಗಿಸಿದೆ.

ಗುರುಗಳು 2004 ರಲ್ಲಿ ಪುಣೆಗೆ ಭೇಟಿಯಿತ್ತು ನಿರ್ಮಾಣದ ಕೆಲಸ ಅಂತಿಮ ಹಂತದಲ್ಲಿರುವುದನ್ನು ಕಂಡಿದ್ದರು. ನಿರ್ಮಾಣ ಸಂಪೂರ್ಣಗೊಂಡ ಕೂಡಲೇ ಸತ್ಸಂಗಗಳನ್ನು ಆರಂಭಿಸಲು ಗುರುಗಳು ಕೇಂದ್ರಸಂಚಾಲಕರಿಗೆ ಆದೇಶಿಸಿದ ಕಾರಣ ಪ್ರಥಮ ಸತ್ಸಂಗವು 2004ರ ಎಪ್ರಿಲ್ 4ರಂದು ನಡೆಯಿತು.

ಆಶ್ರಮದ ಧ್ಯಾನ ಮಂದಿರವು ಸುಮಾರು 2325 ಚದರ ಅಡಿ ವಿಸ್ತಾರವಿದ್ದು ಸುಮಾರು 250 ಮಂದಿಗೆ ಸಾಕಾಗಬಹುದು. 2009ರಲ್ಲಿ ಹೆಚ್ಚಿನ 200 ಅಭ್ಯಾಸಿಗಳಿಗೆ ಸಾಕಾಗುವ ಹಾಗೆ ತಾತ್ಕಾಲಿಕ ವಿಸ್ತಾರವನ್ನು ಮಾಡಲಾಯಿತು. ಇತರ ಸೌಲಭ್ಯಗಳು ಮೊದಲನೆ ಮಹಡಿಯ ಆಶ್ರಮಪಾಲಕರ ಕೋಣೆಯೊಂದಿಗೆ, ಅಡುಗೆಕೋಣೆ, ಮಕ್ಕಳ ಕೇಂದ್ರ, ಮತ್ತು ಶೌಚಾಲಯ ಸಂಕೀರ್ಣ, ಕಾರು ತಂಗುದಾಣಗಳನ್ನೊಳಗೊಂಡಿವೆ. ಕಟ್ಟಡಗಳನ್ನು ಆವರಿಸಿದಂತೆ ಹಚ್ಚ ಹಸಿರಿನ ಹುಲ್ಲುಹಾಸುಗಳು ಮತ್ತು ವಿವಿಧ ಹಣ್ಣಿನ ಮರಗಳಿವೆ.

ಗುರುಗಳು ಪುಣೆಗೆ ಭೇಟಿ ಕೊಟ್ಟ ಅನೇಕ ಸಂದರ್ಭಗಳಲ್ಲಿ ಈ ಆಶ್ರಮದಲ್ಲಿ ಸತ್ಸಂಗಗಳನ್ನು ನಡೆಸಿಕೊಟ್ಟಿದ್ದಾರೆ. ಭವಿಷ್ಯತ್ತಿನ ಬೆಳವಣಿಗೆಯ ಆವಶ್ಯಕತೆಗಳಿಗೆ ಪೂರಕವಾಗುವಂತೆ ಆಶ್ರಮ ಸೌಲಭ್ಯವಿಸ್ತರಣೆಯ ಪ್ರಧಾನ ಯೋಜನೆಯೊಂದನ್ನು ಗುರುಗಳ ಅನುಮೋದನೆಗಾಗಿ ಮಂಡಿಸುವ ಸಲುವಾಗಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಆಶ್ರಮ ನಿರ್ವಹಣಾ ಸಮಿತಿಯು ತೊಡಗಿದೆ.















**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.